ನೇಸರು

ತಿಂಗಳೋಲೆ

₹ 5/-

PAGES 20

JUNE 2022 | Nesaru Tingalole | Vol. XL - 6

ಎಷ್ಟು ಬಾರಿ ಒಡೆದರೂ ಮತ್ತೆ ಮತ್ತೆ ಕೂಡಿ ಬರುವ ನಮ್ಮ ಕೂಡಲ ಸಂಗಮ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

ಸಯನ್ ಮುಂಬಯಿ ಗೋಕುಲದ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ 2022ರ ಮೇ 8ರಿಂದ 16ರ ವರೆಗೆ ನಡೆದ ಬ್ರಹ್ಮಕಲಶೋತ್ಸವ ಸಂದರ್ಭದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮೈಸೂರು ಅಸೋಸಿಯೇಶನ್ ತಂಡದವರಿಂದ ಪ್ರದರ್ಶಿಸಲ್ಪಟ್ಟ ನಾಟಕದ ಕೆಲವು ದೃಶ್ಯಗಳು.

ಸಂಪಾದಕೀಯ

ನೇಸರು ತಿಂಗಳೋಲೆ

ಸಂಪುಟ 40 ಜೂನ್–2022 ಸಂಚಿಕೆ 6

ಇಂದು ನಮ್ಮ ನಾಡಿನಲ್ಲಿ ಧರ್ಮಗಳ ತಿಕ್ಕಾಟ ನಡೆಯುತ್ತಿದೆ. ಇದರಲ್ಲಿ ಹೊರಗಿನಿಂದ ಕುಮ್ಮಕ್ಕು ಕೊಡುವರೂ ಇದ್ದಾರೆ. ಇದೇನೂ ಹೊಸತಲ್ಲ. ಈ ತೆರನ ತಿಕ್ಕಾಟ ಹಿಂದೂ ಇದ್ದದ್ದೆ. ಆದರೆ ಈಗ ನಡೆಯುವ ತಿಕ್ಕಾಟ ಹೋರಾಟವಾಗಿ ಮಾರ್ಪಾಡಾದರೆ, ನಮ್ಮ ನಾಡಿಗೆ ಒಂದು ಕುತ್ತು ಬರುವುದು ದಿಟ. ಹೌದು, ಹಿಂದೆ ನಮ್ಮ ಗುಡಿಗಳನ್ನು ಹೊರಗಿನಿಂದ ಬಂದ ಸುಲ್ತಾನರು, ಬಾದಷಾಹಗಳು ಕೆಡವಿ, ಅದರ ಎಡೆಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ್ದುದು, ಒಂದು ನಡೆದ ಸಂಗತಿ. ಅದಾಗಿ ೫೦೦-೭೦೦ ವರ್ಷಗಳಾಗಿವೆ. ನಮ್ಮದನ್ನು ಮತ್ತೆ ನಾವು ಪಡೆಯಬೇಕೆಂಬುದು ಒಂದು ಬಣದ ಆಸೆಯಾದರೆ, ತಾವು ಹಿಡಿದಿರುವುದನ್ನು ಮತ್ತೆ ಬಿಟ್ಟುಕೊಡ ಕೂಡದೆಂಬುದು ಇನ್ನೊಂದು ಬಣದ ಹಟ. ಆದರೆ ನಾವು ನಮ್ಮೆಲ್ಲರ ತಿಕ್ಕಾಟಗಳನ್ನು, ಕೋರ್ಟುಗಳಲ್ಲಿಯೇ ಬಗೆ ಹರಿಸಿಕೊಂಡು ಹೋಗುವುದು ಎಲ್ಲರಿಗೂ ಲೇಸು. ಬೀದಿಯಲ್ಲಿ ಇದು ಬಗೆ ಹರಿಯುವುದಿಲ್ಲ. ಬರೀ ಕೈ-ಕೈ ಸೇರುವುದಷ್ಟೆ.

ರಾಮಜನ್ಮಭೂಮಿ- ಬಾಬರಿ ಮಸೀದಿಯ ತಿಕ್ಕಾಟ ಬಗೆ ಹರಿದಿದ್ದು ಕೋರ್ಟ್ ನಲ್ಲಿಯೇ. ಎಲ್ಲರೂ ಅದನ್ನು ಒಪ್ಪಿಕೊಂಡು ನಡೆದಿದ್ದರಿಂದ ಲೇಸಾಗಿ ಬಗೆ ಹರಿಯಿತು. ಎಲ್ಲರೂ ದೂರ ಸರಿದು, ತಮ್ಮ ತಮ್ಮ ಕೆಲಸದಲ್ಲಿ ತೊಡಗಿದರು. ಇದೇ ನಮಗೆ ಕಾಶಿ, ಮಥುರಾ ಮತ್ತು ಇನ್ನೆಡೆಯಲ್ಲಿಯೂ ದಾರಿ ತೋರುವ ದೀಪವಾಗಬೇಕು.

ದೇವರನ್ನು ಕಂಡವರು, ಅವನ ಹೆಸರು -ರೂಪವನ್ನು ಬಲ್ಲವರು ಯಾರೂ ಇಲ್ಲ. ಇನ್ನಾರೋ ಸಾವಿರ ವರ್ಷಗಳ ಹಿಂದೆ ಹೇಳಿದರೆಂದು ನಂಬಿ ನಡೆಯುವುದೂ ಸರಿಯಲ್ಲ. ನಾವುಗಳೆಲ್ಲ ನಮಗೆ ತೋರಿದ ಬಗೆಯಲ್ಲೇ ಅವನನ್ನು ಪೂಜೆ ಮಾಡುತ್ತೇವೆ. ಕೆಲವರು ಒಂದು ಮೂರ್ತಿಯನ್ನು ಇಟ್ಟು ಪೂಜೆ ಮಾಡಬಹುದು. ಇದಕ್ಕೆ ಹೂಗಳು ಬೇಕಾಗುತ್ತದೆ. ಹೂಗಳೇ ಇಲ್ಲದ ಮರಳು ಗಾಡಿನಲ್ಲಿ, ಅವನನ್ನು ನಮ್ಮ ಎದೆಯ ಕೂಗಿನಿಂದ ಮಾತ್ರ ಕರೆಯಬಹುದು. ಎಲ್ಲವೂ ಒಂದೇ ಎಡೆಗೆ ಸಲ್ಲುವುದು.

ಅವನ ಮಕ್ಕಳು ನಾವು ಪಾಲಿಗಾಗಿ ಹೋರಾಡುವುದು ಸರಿಯಲ್ಲ. ಎಲ್ಲರನೂ ಸಲಹುವನು, ಇದಕೆ ಸಂಶಯವಿಲ್ಲ. ಆದುದರಿಂದ ಈಗ ಎಲ್ಲರೂ ಕೋರ್ಟಿನ ತೀರ್ಮಾನಕ್ಕಾಗಿ ತಾಳ್ಮೆಯಿಂದ ಕಾಯುವುದೇ ತಕ್ಕ ನಡೆವಳಿಕೆ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

\- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
☎24024647 / 24037065
Email:
Mysoreassociation.mumbai@gmail.com
Website:
www.mysoreassociation.in

ಜ್ಞಾನ ವಾಪಿ ಮಂದಿರ

✍ ಡಾ. ಬಿ. ಆರ್. ಮಂಜುನಾಥ್

ಭಾರತ ಪ್ರಾಚೀನದಿಂದಲೂ ಒಂದಾಗಿದ್ದ ನಾಡು. ಇದು ಹೇಗೆ? ಭಾಷೆಗಳು ಬೇರೆ ಬೇರೆ, ಆಹಾರ ಬೇರೆ ಬೇರೆ, ನಡವಳಿಕೆಗಳು ಬೇರೆ ಬೇರೆ ಆಗಿದ್ದರೂ ನಾಡು ಒಂದಾಗಿದ್ದು ಹೇಗೆ? ಬೇರೆ ಬೇರೆ ರಾಜರುಗಳು ಆಳುತ್ತಿದ್ದ ರಾಜ್ಯಗಳು ಒಂದಾಗಿದ್ದು ಎಂತು?

ನಾಡಿನಲ್ಲಿ ಎಲ್ಲಿದ್ದರೂ ಕೂಡ ತೀರ್ಥಯಾತ್ರೆ ಮಾಡುವುದು ಎಲ್ಲರ ಆಶಯವಾಗಿತ್ತು. ದಕ್ಷಿಣದಲ್ಲಿಯಾದರೂ ಇರಲಿ,

ಉತ್ತರ, ಪಶ್ಚಿಮ, ಪೂರ್ವದಲ್ಲಿ ಇದ್ದರೂ ಕೂಡ ಕಾಶಿಗೆ ಹೋಗಿ ಗಂಗೆಯಲ್ಲಿ ಮಿಂದು, ವಿಶ್ವೇಶ್ವರನ ದರ್ಶನ ಮಾಡಬೇಕು ಎಂಬುದೇ ಎಲ್ಲರ ಕಡೆಯ ಆಶಯವಾಗಿತ್ತು. ಮಕ್ಕಳಿಗೆ ತಮ್ಮ ವ್ಯವಹಾರಗಳನ್ನೆಲ್ಲಾ ಒಪ್ಪಿಸಿ, ಗಂಡ-ಹೆಂಡತಿ ಒಂದು ಸಣ್ಣ ಗಂಟು ಕಟ್ಟಿಕೊಂಡು ಕಾಲು ನಡಿಗೆಯಲ್ಲಿಯೇ ಕಾಶಿಯತ್ತ ಸಾಗುತ್ತಿದ್ದರು. ಎಲ್ಲಿ ತಂಗುವುದು, ಎಲ್ಲಿ ಉಂಬುವುದು ಎನ್ನುವ ಯಾವ ಆತಂಕವೂ ಇಲ್ಲದೆ ದೇವರ ಮೇಲೆ ಭಾರ ಹಾಕಿ ನಡೆಯುತ್ತಿದ್ದರು. ದಾರಿಯಲ್ಲಿ ಆಯಾ ಊರುಗಳಲ್ಲಿದ್ದ ದೇಗುಲಗಳಲ್ಲಿ ಉಳಿದು, ಅಲ್ಲಿಯೇ ಅಡಿಗೆ ಮಾಡಿಕೊಂಡೋ, ಇಲ್ಲವೋ ಊರವರು ನಡೆಸುತ್ತಿದ್ದ ಅನ್ನ ಸತ್ರಗಳಲ್ಲಿ ಊಟ ಮಾಡಿಕೊಂಡು, ಮುಂದೆ ನಡೆಯುತ್ತಿದ್ದರು. ಆ ಊರಿನವರ ಭಾಷೆ ಇವರಿಗೆ ತಿಳಿಯದಿದ್ದರೂ ಕೂಡ, ಆ ಊರಿನವರು ತಮ್ಮ ಮಾತಿನಲ್ಲಿ "ನೀವು ಯಾವ ಊರಿನವರು?" ಎಂದರೆ ಇವರು ತಮ್ಮ ಊರಿನ ಹೆಸರು ಹೇಳುತ್ತಿದ್ದರು. "ಎಲ್ಲಿಗೆ ಹೊರಟಿದ್ದೀರಾ?" ಎಂದರೆ 'ಕಾಶಿ' ಎಂದ ಕೂಡಲೇ ಆ ಊರಿನ ಜನರು ತಮ್ಮ ಬಾಗಿಲನ್ನು ತೆರೆದು ಆದರದಿಂದ ಬರಮಾಡಿಕೊಳ್ಳುತ್ತಿದ್ದರು. ನಡೆದೂ ನಡೆದು, ಎರಡು ಮೂರು ತಿಂಗಳ ಮೇಲೆ ಕಾಶಿಗೆ ಬರುತ್ತಿದ್ದರು. ಇದು ನಮ್ಮೆಲ್ಲರ ನಾಡಿನವರನ್ನೂ ಭಾರತೀಯರನ್ನಾಗಿ ಮಾಡಿದ ಪಯಣ.

'ಕಾಶಿ' ಎಂದರೇನು? 'ಕಾಶ' ಎಂದರೆ 'ತೋರುವ ಬೆಳಕು' ಎಂದರ್ಥ. ಅಂತಹ ಬೆಳಕು ಇರುವ ಸ್ಥಾನಕ್ಕೆ 'ಕಾಶಿ' ಎಂದು ಹೆಸರು. ಇದಕ್ಕೆ 'ವಾರಣಾಸಿ' ಎಂದೂ ಹೆಸರು. 'ವಾರಣ' ಮತ್ತು 'ಅಸಿ' ಎಂಬ ಎರಡು ನದಿಗಳು ಕೂಡುವ ಸ್ಥಾನ. ಇದು ಶಿವನ ನೆಲ. ಅಂದರೆ "ಎಲ್ಲಾ ಆಸೆಗಳನ್ನೂ ಸುಟ್ಟ ಜಾಗ ಆಸೆಗಳನ್ನೆಲ್ಲಾ ಸುಟ್ಟರೆ ಈ ಜೀವನದ ಪ್ರಯಾಣ ಮುಗಿದಂತೆಯೇ. ಆಮೇಲೆ ಉಳಿಯುವುದು 'ಸ್ಮಶಾನ'. ಸ್ಮಶಾನದಲ್ಲಿರುವುದು 'ಬೂದಿ'. ಆಸೆಗಳನ್ನೆಲ್ಲಾ ಸುಟ್ಟವರು ಬೂದಿಯನ್ನು ತಾನೇ ಬಳಿದುಕೊಳ್ಳುವುದು! ಈ ಜೀವನದ ಪ್ರಯಾಣದ ಕಡೆಯ ಗುರಿ ಈ ಸ್ಮಶಾನವನ್ನು ಸೇರುವುದು. 'ಸ್ಮಶಾನ' ಎಂದ ಕೂಡಲೇ ತಮಗೆಲ್ಲಾ ಮುಜುಗರವಾಗುವುದು. ಆದರೆ ಅಲ್ಲಿಗೇ ತಾನೇ ಎಲ್ಲರೂ ನಡೆದು ಹೋಗುತ್ತಿರುವುದು? ಹೀಗೆ 'ಕಾಶಿ' ಭಾರತದ ಎಲ್ಲರಿಗೂ ಅಂತಿಮ ಗುರಿಯಾಗಿತ್ತು.

ಕಾಶಿಯ ಮೊಟ್ಟಮೊದಲಿನ ವಿಶ್ವೇಶ್ವರನ ಗುಡಿಯನ್ನು ಯಾರು ಕಟ್ಟಿಸಿದರು? ಇದು ಯಾರಿಗೂ ಗೊತ್ತಿಲ್ಲ. ಗಂಗೆಯ ತೀರದಲ್ಲಿ ಬಂದು ಪೂಜೆ ಮಾಡುವ ಒಂದು ಗುಡಿಯನ್ನು ಅತಿ ಹಿಂದಿನ ಕಾಲದಲ್ಲಿಯೇ ಅಲ್ಲಿನ ಮಂದಿ ಕಟ್ಟಿಕೊಂಡಿದ್ದರು. ಅನೇಕ ರಾಜರು ತಾವೇ ಕಾಶಿ ಯಾತ್ರೆಗೆ ಬಂದಾಗ ಅಲ್ಲಿದ್ದ ಗುಡಿಯ ಪ್ರಾಕಾರದಲ್ಲಿ ಹೆಚ್ಚಿನ ಕಟ್ಟಡಗಳನ್ನು ಕಟ್ಟಿಸಿದರು ಎನ್ನುವುದಕ್ಕೆ ಯಾವ ಅನುಮಾನವೂ ಇಲ್ಲ. ಆದರೆ ಇದಕ್ಕೆ ಬೆನ್ನೆಲುಬು ನಾಡಿನ ಮಂದಿನ ನಂಬಿಕೆ.

ಇಲ್ಲಿ ಇರುವುದು 'ಶಿವಲಿಂಗ'. ಈಗ ಬೆಳೆದ ಮಂದಿಗೆ ಇದರ ಪರಿಜ್ಞಾನವಿಲ್ಲ. ಲಿಂಗ ಎಂದರೆ ಗಂಡಸರ ಒಂದು ಜನನಾಂಗ ಎಂಬ ತಿಳಿವಳಿಕೆಯನ್ನು ಪಾಶ್ಚಾತ್ಯರು ನಮ್ಮ ತಲೆಯಲ್ಲಿ ತುಂಬಿದ್ದಾರೆ. ಸಂಸ್ಕೃತದಲ್ಲಿ 'ಲಿಂಗ' ಎಂದರೆ 'ಚಿಹ್ನೆ' , 'ಸಂಕೇತ'

ಎಂದರ್ಥ. ಸಂಸ್ಕೃತದಲ್ಲಿ 'ಶ್' ಎಂದರೆ 'ಮಂಗಳ' ಎಂದರ್ಥ. 'ಮಂಗಳದ ಸಂಕೇತ' – 'ಶಿವಲಿಂಗ', 'ಶಿವ-ಶುಭ' ಎರಡೂ ಒಂದೇ. 'ಶಂಕರ' ಎಂದರೆ ಶುಭವನ್ನು ಉಂಟುಮಾಡುವವನು ಎಂದು.

ಒಂದು ಸಂಕೇತ ಹೇಗಿರಬೇಕು? ದೇವರು 'ನಿರಾಕಾರ', 'ನಿಸ್ವರೂಪ'. ಹೌದು. ಆದರೆ ಇದನ್ನು ಒಬ್ಬ ಶಿಲ್ಪಿ ಮಾಡುವುದು ಹೇಗೆ? ಯಾವ ಆಕಾರವೂ ಇಲ್ಲದಂತೆ ಎಂತು? ಇದಕ್ಕೆ ಶಿಲ್ಪ ಶಾಸ್ತ್ರವಿತ್ತ ಉತ್ತರ -ಬಗೆ, ಒಂದು ಗುಂಡಾದ ಕಲ್ಲು. ಇದಕ್ಕೆ ಯಾವ ತೆರನಾದ ಮುಖ್ಯ ಕೈ, ಕಾಲುಗಳಿಲ್ಲ. ಯಾವ ಕಡೆಯಿಂದ ನೋಡಿದರೂ ಒಂದೇ ತೆರನಾಗಿ ಕಾಣುವುದು. ಈ ಗುಂಡಾದ ಕಲ್ಲು, ಬಣ್ಣ ಬಣ್ಣವಿಲ್ಲದ್ದಾಗಿರಬೇಕೆಂದರೆ, ಅದು ಕಪ್ಪು ಕಲ್ಲೋ, ಇಲ್ಲವೇ ಬೆಳಕು ತೂರುವ ಸ್ಫಟಿಕವೋ ಆಗಿರಬೇಕು. ಹೌದು ಹೀಗೆ ಗುಂಡಾಗಿ ಕೆತ್ತಿದ ಕಲ್ಲನ್ನು ನಿಲ್ಲಿಸುವುದಾದರೂ ಹೇಗೆ? ಅದಕ್ಕೇ ಈ ಗುಂಡಾದ ಕಲ್ಲನ್ನು ನೆಲದಲ್ಲಿ ಹೂತಿರುವುದು. ಈ ಗಂಗಾಧರನಿಗೆ ನಿರಂತರವಾಗಿ ಗಂಗಾಭಿಷೇಕವನ್ನು ಮಾಡಬೇಕು. ಹಾಗೆಯೇ ನೀರನ್ನು ಸುರಿದರೆ ಎಲ್ಲಾ ಕಡೆ ಚೆಲ್ಲಿ ಭಕ್ತರ ಕಾಲಡಿಗಳ ಮೇಲೆ ಬೀಳುವುದು. ಅದಕ್ಕಾಗಿ, ನೀರು ಹರಿಯಲು ಒಂದು ದೋಣಿಯನ್ನು ಮಾಡುವುದು. ಇದಕ್ಕೆ 'ಪಾಣಿಪೀಠ' ಎಂದು ಹೆಸರು. ಏಕೆ? ಮೊದಲಿಗೆ ಭಕ್ತರು ಈ ಶಿವಲಿಂಗವನ್ನು ಕೈಯಲ್ಲೇ ಇಟ್ಟುಕೊಂಡು ಪೂಜೆ ಮಾಡುತ್ತಿದ್ದರಿಂದ, ಅದಕ್ಕೆ ಪಾಣಿಪೀಠ ಎಂದಾಯ್ತು.

"ಆಸೆಯೇ ದುಃಖಕ್ಕೆ ಕಾರಣ" ಎಂದು ಗೌತಮ ಬುದ್ಧ ಮೊದಲು ಸಾರಿದನೆಂದು ನಮಗೆಲ್ಲಾ ಪಾಠವಾಗಿತ್ತು. ಆದರೆ ಬುದ್ಧನಿಗಿಂತ ಜೈನ ತೀರ್ಥಂಕರು ಸಾವಿರ ವರ್ಷ ಹಳೆಯವರು. ಅವರು 'ಮಾನವನ ಹಗೆಗಳು' ಅರಿಷಡ್ವರ್ಗ ಎಂದು ಸಾರಿದ್ದರು. ಅದರಲ್ಲಿ ಆಸೆಯೇ ಮೊದಲ ಹಗೆ. ಅದನ್ನು ಗೆದ್ದರೆ ಮಾನವ ತೀರ್ಥಂಕರನಾಗುತ್ತಿದ್ದ. ಆದರೆ ಜೈನರಿಗಿಂತ ಹಳೆಯದಾದದ್ದು ಸಿಂಧೂ ಸರಸ್ವತಿ ನದಿಯ ಸಂಸ್ಕೃತಿ. ಅಲ್ಲಿಯೇ ನಮಗೆ ಶಿವನ ಮೂರ್ತಿ ದೊರೆಕುತ್ತದೆ. ದಿಗಂಬರನಾಗಿ ಕುಳಿತಿರುವ ಈ ದೇವ, ಪ್ರಾಣಿಗಳ ನಡುವೆ ಇದ್ದಾನೆ. ಆಸೆಯನ್ನು ಸುಟ್ಟವನು 'ಶಿವ' ಜೈನರಲ್ಲ, ಬೌದ್ಧರಲ್ಲ.

ಇಂತಹ ಶಿವನ ದರ್ಶನಕ್ಕಾಗಿ ಸಾವಿರಾರು ವರ್ಷಗಳಿಂದ ಭಾರತೀಯರು ಹಾತೊರೆಯುತ್ತಿದ್ದಾರೆ. ಇಂತಹ ದೇವನ ಗುಡಿ ಕಾಶಿಯಲ್ಲಿ ಇದೆ. ಹೊರಗಿನವರಿಗೆ ಕಲ್ಲಾಗಿ ತೋರುವ ಈ ದೇವ, ಭಾರತೀಯರ ಮನದಲ್ಲಿ ಅಚ್ಚಳಿಯದೆ ನಿಂತಿದ್ದಾನೆ.



Nandi's long wait Kashi Vishwanath Temple

ನಮ್ಮ ಇತಿಹಾಸವನ್ನು ಯಾರೂ ಮೊದಲಿಗೆ ದಾಖಲು ಮಾಡಿರಲಿಲ್ಲ. ಏಕೆಂದರೆ ನಮಗೆ ನೆಚ್ಚಿಕೆಯೇ ಮುಖ್ಯವೇ ಹೊರತು, ಕಲ್ಲು-ಹಾಳೆಗಳ ಮೇಲಿನ ದಾಖಲಾತಿಯಲ್ಲ.

ನಮ್ಮ ಶೈವ ಸಂಪ್ರದಾಯದಲ್ಲಿ ವಚನಗಳಲ್ಲಿ ಕಾಶಿಯನ್ನು ಮೂಡಿಸಿಯಾಗಿದೆ. ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದು ಕಾಶಿಯದು. 1490 ರಲ್ಲಿ ಇದರ ಮೂಡಿಕೆ ಇತಿಹಾಸದಲ್ಲಿ ಕಾಣುತ್ತದೆ. ಗುರುನಾನಕ್ ಕಾಶಿಗೆ ಬಂದು ಶಿವದರ್ಶನವನ್ನು 1506 AD ಯಲ್ಲಿ ಮಾಡಿದ ದಾಖಲೆ ನಮಗೆ ಕಾಣಬರುತ್ತದೆ. ಅಲ್ಲಿಯ ಪಂಡಿತ ಚತುರ್ ದಾಸ್ ನೊಡನೆ ದಾರ್ಶನಿಕ ಮಾತುಕಥೆ ಮಾಡಿದುದು ತಿಳಿದು ಬರುತ್ತದೆ.

1699 ರಲ್ಲಿ ಔರಂಗಬೇಬದ ಆದೇಶದ ಮೇರೆಗೆ ಕಾಶಿ ವಿಶ್ವೇಶ್ವರ ಮಂದಿರವನ್ನು ಒಡೆಯಲಾಗುತ್ತದೆ. ಆಗಿನ ಕಥೆಯ ಅನುಸಾರ, ಅಲ್ಲಿನ ಅರ್ಚಕರು ಶಿವಲಿಂಗವನ್ನು ತಮ್ಮೊಡನೆ ಕೊಂಡು, 'ಜ್ಞಾನವಾಪಿ' ಎಂಬ ಬಾವಿಗೆ ಬಿದ್ದರು ಎನ್ನುವ ಕತೆಯೂ ಇದೆ. ಕಥೆ ಏನೇ ಇರಲಿ ನಂತರ ಅಲ್ಲಿ ಒಂದು ಮಸೀದಿಯನ್ನು ಕಟ್ಟಲಾಯಿತು. ಈಗಿನ ಜ್ಞಾನವಾಪಿ ಮಸೀದಿಯ ಹಿಂದಿನ ಗೋಡೆಗಳೆಲ್ಲಾ ಈ ಶಿವನ ದೇವಾಲಯದ ಮೊದಲಿನ ಗೋಡೆಗಳೇ ಆಗಿರುವುದು ಈಗಲೂ ಕಾಣಬಹುದು. ಅದರ ಮೇಲೆ ಎಲ್ಲ ಹಿಂದೂ ಪ್ರತಿಮೆಗಳು ಇರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಶಿವನ ದೇವಾಲಯವನ್ನೇನೋ ಒಡೆದರು. ಆದರೆ ಅಲ್ಲಿಯ ಪಕ್ಕದಲ್ಲಿರುವ ಶೃಂಗಾರ ಗೌರಿಯ ದೇವಾಲಯ, ಗಣೇಶ ದೇವಾಲಯಗಳು ಇನ್ನೂ ಮಸೀದಿಯ ಒಳಾಂಗಣದಲ್ಲಿಯೇ ಇವೆ. ಇಲ್ಲಿ 1992 ವರೆಗೂ ದಿನಪೂಜೆ ನಡೆಯುತ್ತಿದ್ದು, ನಂತರ ವರ್ಷಕೊಮ್ಮೆ ಭಕ್ತರನ್ನು ಪೂಜೆಗೆ

ಮಸೀದಿಯ ಆಡಳಿತ ವರ್ಗ ಬಿಡುತ್ತಿತ್ತು. ಆದರೆ ರಾಮಜನ್ಮ ಭೂಮಿ ಬಾಬರಿ ಮಸೀದಿಯ ತೀರ್ಪಿನ ನಂತರ ಪೂಜೆಗೆ ಯಾರನ್ನೂ ಬಿಡದೆ, ಪ್ರಕರಣ ಕೋರ್ಟಿನ ಕಟ್ಟೆ ಹತ್ತಿದೆ.

ಅದೇನೇ ಇರಲಿ, ಶಿವ ನಮ್ಮ ಮನದಲ್ಲಿ ಬೇರೂರಿ ಬಿಟ್ಟಿದ್ದಾನೆ. ಅವನನ್ನು ಕಾಣುವತವಕ ಹೆಚ್ಚಿದ್ದರಿಂದ ರಾಣಿ ಅಹಲ್ಯಾಬಾಯಿ 1725ಯಲ್ಲಿ ಮತ್ತೆ ಮಸೀದಿಯ ಪಕ್ಕದಲ್ಲಿಯೇ ದೇವಾಲಯವನ್ನು ಕಟ್ಟಿ ಮತ್ತೊಂದು ಶಿವಲಿಂಗವನ್ನು ಪ್ರತಿಷ್ಠಾಪನೆಯನ್ನು ಮಾಡಿದಳು. ನಮ್ಮ ಮಂದಿ ಈ 500 ವರ್ಷಗಳಲ್ಲಿ ಏನೂ ತಗಾದೆ ಮಾಡದೆ ತಮ್ಮ ಅರ್ಚನೆಯನ್ನು ಮುಂದುವರೆಸಿಕೊಂಡು ಬಂದಿದಾರೆ.

ಶಿವನ ಭಕ್ತರಲ್ಲಿ ಮೊಟ್ಟ ಮೊದಲನೆಯವನು ಯಾರು? ಅವನೇ "ಬಸವ-ನಾದಿ". ಈತ 'ದೇವ' ಮತ್ತೆ ಬಂದೇ ಬರುವನೆಂದು ನೆಚ್ಚಿಕೆ ಇಂದ ಅಲ್ಲಿಯೇ ಕಾದು ಕುಳಿತಿರುವುದು ನಮಗೆ ಕಾಣಬರುತ್ತದೆ. ಈಗ ಕೋರ್ಟು, ASI ಇತ್ತ ನಿರ್ದೇಶನದ ಅನುಸಾರವಾಗಿ ಒಂದು ವಿಡಿಯೋ ದಾಖಲೆ ಮಾಡಿದ ಮೇಲೆ, ಮಸೀದಿಯ ಕೆಳಗಿರುವ ಜಾಗದಲ್ಲಿ ಒಂದು ಕೈಕಾಲು ತೊಳೆಯುವ ಕೊಳವಿದ್ದು ಅದರಲ್ಲಿ ಶಿವಲಿಂಗವಿರುವುದು ಕಾಣಬರುತ್ತದೆ. ಕರಿಕಲ್ಲಿನ ಈ ಶಿವಲಿಂಗದ ಮೇಲೆ ಒಂದು ಬಿಳಿಯ ಕಲ್ಲನ್ನು ಕೂರಿಸಿ, ಅದನ್ನು ಮಸೀದಿಯವರು ಚಿಲುಮೆ ಎಂದು ಕರೆಯುತ್ತಾರೆ. ಇದರ ಕೆಳಗೆ ಇನ್ನೊಂದು ನೆಲಮಾಳಿಗೆ ಇದ್ದು ಅದನ್ನು ತಪಾಸು ಮಾಡಲು ಕೋರ್ಟಿನಲ್ಲಿ ಕೋರಿಕೆಯಾಗಿದೆ.

"ಅವನಿದ್ದಿದ್ದೂ ದಿಟ, ಅವನೊಲಿದುದು ದಿಟ, ಅವ ಬಹನೆಚ್ಚು" ಎಂದು ನಂದಿಯಂತೆ ನಾವೆಲ್ಲರೂ ಒಂದೇ ಮನಸ್ಸಿನಿಂದ 'ಓಂ ನಮಃ ಶಿವಾಯ' ಎಂದು ನೆನಸುತ್ತಿದ್ದರೆ, ಆ ಶಿವ ಜ್ಯೋತಿಯಾಗಿ ಮತ್ತೆ ಬರುವುದೂ ದಿಟ.

****

ಜಯಹೇ ಕನ್ನಡ ತಾಯಿಗೆ

ಪಿ.ಕೆ.ನರಸಿಂಹ ಮೂರ್ತಿ

ನಮಗಾಗಿಯೆ ಹುಟ್ಟಿದ ನುಡಿಯು
ಸುಂದರ ಸುಮಧುರ ಮನೋಹರ
ನಾವಾಗಿಯೆ ಬೆಳೆಸಿದ ಭಾಷೆಯು
ಅಕ್ಷತ ಸುಲಲಿತ ಸುಭಾಷಿತ
ಜಯಹೇ ಕನ್ನಡ ನುಡಿಗೆ
ಜಯಹೇ ಕನ್ನಡ ತಾಯಿಗೆ

ಅನಾಥ ಪ್ರಜ್ಞೆಯ ದೂಡುವ
ಹೃದಯದಿ ಉದಿಸಿದ ನೇಸರ
ಅತಂತ್ರ ಭಾವವ ಕಳಚುವ
ನೆಲಜಲ ಜನಮನ ಬಂಧುರ
ಜಯಹೇ ಕನ್ನಡ ನುಡಿಗೆ
ಜಯಹೇ ಕನ್ನಡ ತಾಯಿಗೆ

ನೂರಾರು ವರುಷದ ಸಂಘರ್ಷದಿ
ಉಳಿದು ಹರಿದಿಹ ಮಹಾನದಿ
ಹಲವು ಮಹಿಮರ ಕೃಷಿಯಿಂದ
ಸಂಸ್ಕರಿಸಿ ಚಿಗುರಿಹ ಸಿರಿಗಂಧ
ಜಯಹೇ ಕನ್ನಡ ನುಡಿಗೆ
ಜಯಹೇ ಕನ್ನಡ ತಾಯಿಗೆ

ಈ ಭಾಷೆ ಉಳಿದರೆ ಮಾತ್ರ
ನಾವು ಸುಮಾನ್ಯ ಸ್ವತಂತ್ರ
ಈ ಭಾಷೆ ಬೆಳೆದರೆ ಮಾತ್ರ
ನಾವು ಸಶಕ್ತ ವಿಕಾಸಿತ
ಜಯಹೇ ಕನ್ನಡ ನುಡಿಗೆ
ಜಯಹೇ ಕನ್ನಡ ತಾಯಿಗೆ

ಅಪರಾಧಿ

✍ ಉಮಾ ರಾವ್

ವರ್ಷಗಳ ಹಿಂದೆ, ನಾನು ಮೊದಲ ಸಲ ಕೇಶವನನ್ನು ನೋಡಿದ್ದು ಅನಾಥಾಶ್ರಮದಲ್ಲಿ. ವಾರಕ್ಕೊಂದು ಸಲ ಐದನೇ ಸ್ಟಾಂಡರ್ಡ್ ಮಕ್ಕಳಿಗೆ ಇಂಗ್ಲೀಷ್ ಹೇಳಿಕೊಡಲು ಹೋಗುತ್ತಿದ್ದಾಗ, ಅಂದು ಯಾವಾಗಲೂ ಇರುತ್ತಿದ್ದ ಹುಡುಗರೊಡನೆ ಮತ್ತೊಂದು ಹೊಸ ಮುಖ ಕಂಡಿತ್ತು. ಕಪ್ಪು ಬಣ್ಣ, ಸಣಕಲು ಮೈ, ಹೊಳೆಯುವ ಕಣ್ಣುಗಳು. ಅವನು ಹಾಕಿಕೊಂಡಿದ್ದ ಬಣ್ಣ ಹೋದ ಕೆಂಪು ಟಿ-ಶರಟಿನ ಮೇಲೆ 'ಲವ್ ಈಸ್ ಬ್ಯೂಟಿಫುಲ್' ಎಂಬ ಮಾಸಲು ಹಚ್ಚೆ.

"ನಿನ್ನ ಹೆಸರೇನು" ಎಂದು ಸ್ನೇಹದಿಂದ ಕೇಳಿದಾಗ ಸಂಕೋಚದಿಂದ ತಲೆ ತಗ್ಗಿಸಿ, ಕಿರುನಗೆಯೊಂದಿಗೆ ಮೆಲುದನಿಯಲ್ಲಿ ಉತ್ತರ, "ಕೇಶವ". ಆಗ ಅವನ ಮುರುಕಲು ಹಲ್ಲು ಕಣ್ಣಿಗೆ ಬಿದ್ದಿತ್ತು. "ಹೂಂ, ಮಾವಿನಕಾಯಿ ಕಿಳೋಕೆ ಹೋಗಿದ್ದೇನು? ಅದೇಗೆ ಹಲ್ಲು ಮುರಿಕೊಂಡೀ ಹೇಳು" ಎಂದು ತಮಾಷೆ ಮಾಡಿದಾಗ, ಅವನು ಉತ್ತರ ಕೊಡದೆ ಸುಮ್ಮನೆ ತಲೆ ತಗ್ಗಿಸಿದ್ದ. "ನೋಡು, ತುಂಬಾ ಚೇಷ್ಠೆ ಮಾಡೋಕೆ ಹೋದ್ರೆ ಹೀಗೇ ಆಗೋದು" ಎಂದು ಹೇಳಿ, ಬೆನ್ನ ಮೇಲೆ ಅಕ್ಕರೆಯಿಂದ ಹೊಡೆದಿದ್ದೆ.

ಪ್ರೀತಿಗಾಗಿ ಹಾತೊರೆಯುತ್ತಿದ್ದ ಆ ಸಾವಿರಾರು ಮುಖಗಳಲ್ಲಿ ಅಂದಿನಿಂದ ಅವನೂ ಒಬ್ಬನಾಗಿ ಹೋಗಿದ್ದ.

ಎಂದೋ ಎಲ್ಲೋ ಓದಿದ ನೆನಪು-"ಒಂದು ಮಗುವಿನ ಹೆಸರು "ಇಂದು". ಅವನಿಗೆ ಎಂದೂ "ನಾಳೆ" ಎಂದು ಉತ್ತರ ಕೊಡಲಾರೆವು". ಆದರೆ ಇಲ್ಲಿಯ ಮಕ್ಕಳಿಗೆ ಕಾಮನ ಬಿಲ್ಲಿನ ಕನಸಿನ ಆಸೆ ತೋರಿಸುತ್ತಿದ್ದದ್ದು ಬರಿಯ ಹಾಳೆಗಳೇ. ಈಗ ಅವರ ದಿನಗಳ ತುಂಬಾ ವೈವಿಧ್ಯವೇ ಇಲ್ಲದ ಯಾತ್ರಿಂಕತೆಯ ಏಕತಾನ. ಬೆಳಗ್ಗೆ ಐದೂವರೆಗೆ ಸರಿಯಾಗಿ, ಇನ್ನೂ ಸಕ್ಕರೆ ನಿದ್ದೆಯಲ್ಲಿರುವಾಗಲೇ ಜೋರಾಗಿ ಕುಲುಕಿ ಎಬ್ಬಿಸುವ ಹೌಸ್ ಮದರ್ ಗಳು. ಎಂಬತ್ತು ನೂರು ಹುಡುಗರೊಂದಿಗೆ ತುಂಬಿ ಹೋಗಿರುತ್ತಿದ್ದ ತರಗತಿಗಳಲ್ಲಿ ಒಂದು ಚಿಕ್ಕ ತಪ್ಪಿಗೂ ಕೈಮೇಲೆ ಐವತ್ತು ಚುರುಕೇಟು ಅಥವಾ ಬಿಸಿಲಿನಲ್ಲಿ ದಿನವೆಲ್ಲಾ ನಿಂತಿರುವ ಶಿಕ್ಷೆ. ಬಟ್ಟೆ ಒಗೆದುಕೊಳ್ಳುವುದರಿಂದ, ತಟ್ಟೆ ಹಾಕಿ ಊಟ ಬಡಿಸಿಕೊಳ್ಳುವವರೆಗೂ, ಬೆಳಗಿನಿಂದ ರಾತ್ರಿವರೆಗೆ ಬಿಡುವಿಲ್ಲದ ದುಡಿತ.

ಇಂತಹ ಬೇಸರದ, ಏರಿಳಿತವೇ ಇಲ್ಲದ ದಿನಗಳಲ್ಲಿ ಅವರಿಗೆ ಸಂತಸ ತರುತ್ತಿದ್ದ ವಿಷಯವೆಂದರೆ ಅವರನ್ನು ನೋಡಲು ಬರುತ್ತಿದ್ದ ಜನರು. ಲಲವಿಕೆಯಿಂಡ ಇವರೊಂದಿಗೆ ಬೆರೆತು, ಕ್ರಿಕೆಟ್, ಖೋ-ಖೋ ಆಡುತ್ತಿದ್ದ ಜೀನ್ಸ್-ಟೀ ಶರ್ಟ್ ಧಾರಿ ಕಾಲೇಜು ಹುಡುಗರು; ಕೇವಲ ತಮ್ಮ ಅಭ್ಯಾಸಕ್ಕಾಗಿ ಇವರೊಂದಿಗೆ ಸಂಪರ್ಕ ಹೊಂದಿದ್ದರೂ, ತುಂಬಾ ಸ್ನೇಹದಿಂದ ನಡೆದುಕೊಳ್ಳುತ್ತಿದ್ದ ಹತ್ತಿರವೇ ಇದ್ದ ಇನ್ಸ್ ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ನ ವಿದ್ಯಾರ್ಥಿಗಳು; ತಮ್ಮ ಬಿಡುವಿನ ವೇಳೆಯಲ್ಲಿ ಇಲ್ಲಿಗೆ ಬಂದು ಅವರಿಗೆ ಕತೆ ಹೇಳಿ, ನಕ್ಕು ನಗಿಸುತ್ತಿದ್ದ ಗೃಹಿಣಿಯರು.

ದಿನಗಳೆದಂತೆ, ನನಗೆ ಅವನ ಸ್ವಭಾವದ ಪರಿಚಯ ಆಗತೊಡಗಿತ್ತು. ಸಂಕೋಚ ಸ್ವಭಾವದ ಅವನಿಗೆ ಹೆಚ್ಚು ಸ್ನೇಹಿತರಿರಲಿಲ್ಲ. ಆಕಸ್ಮಿತ ಮನೆ ಕುಸಿತದಲ್ಲಿ ಐದು ವರ್ಷಗಳ ಹಿಂದೆ ಅವನ ಕಣ್ಣೆದುರಿಗೇ ಪ್ರಾಣಬಿಟ್ಟಿದ್ದ ಅವನ ಅಪ್ಪ-ಅಮ್ಮನ ವಿಷಯವನೆಂದೂ ಮಾತನಾಡುತ್ತಿರಲಿಲ್ಲ. ಹೋಂವರ್ಕ್ ಮಾಡಲು ಮರೆತಾಗ, ತಾನು ಮಾಡಬೇಕಾಗಿದ್ದ ಕೆಲಸ ಮಾಡದಿದ್ದಾಗ, ಎಂದೂ ತನ್ನ ತಪ್ಪು ಮುಚ್ಚಲು ನೆವ ಹೇಳುತ್ತಿರಲಿಲ್ಲ. ಗಣಿತವೆಂದರೆ ಅವನಿಗೆ ಅಷ್ಟಕಷ್ಟೆ. ಚಿತ್ರ ಬಿಡಿಸಲು, ಬಣ್ಣ ಹಾಕಲು ತುಂಬಾ ಆಸೆ. ಮರಾಠಿ ಭಜನೆಗಳನ್ನು ತುಂಬು ಕಂಠದಿಂದ ಹಾಡುವುದರಲ್ಲಿ ನಿಸ್ಸೀಮ.

ಕಳೆದು ಹೋದ ಆ ವರ್ಷಗಳ ನೆನಪಿನ ಕಂತೆಯಲ್ಲಿ ಕೈಯಾಡಿಸಿದಾಗ ಕೆಲವು ಘಟನೆಗಳು ನನಗೆ ಇಂದೂ ಹಸಿರಾಗಿ ನೆನಪಿಗೆ ಬರುತ್ತವೆ.

ಅಂದು ಗಣರಾಜ್ಯ ದಿನ, ರೋಟರಿ ಕ್ಲಬ್ಬಿನವರು ಮಕ್ಕಳಿಗೆಲ್ಲಾ ಲಾಡು ಹಂಚಿದ್ದರು. ದಿನವೆಲ್ಲಾ ಕುಟೀರದಾಚೆಯೇ ಕಾದಿದ್ದು, ನನ್ನನ್ನು ನೋಡಿದ ತಕ್ಷಣ ಒಳಗೆ ಓಡಿಹೋಗಿ ಚೀಲದ ಬುಡದಿಂದ ತನಗೆ ಸಿಕ್ಕಿದ ಲಾಡು ಹೊರತೆಗೆದು, ಅದಕ್ಕೆ ಆಗಲೇ ಸಾಲುಗಟ್ಟುತ್ತಿದ್ದ ಇರುವೆಗಳನ್ನು ಝಾಡಿಸಿ, ಸಂಕೋಚದಿಂದ ನನ್ನ ಮುಂದೆ ಹಿಡಿದಿದ್ದ ಅವನು.

ಮತ್ತೊಂದು ದಿನ ಅವನೇ ಬರೆದು ಬಣ್ಣ ಹಾಕಿದ್ದ ಸುಂದರ ಗಣಪತಿಯನ್ನು ಮೆಚ್ಚುತ್ತಿದ್ದಾಗ, ತಲೆ ಕರೆದುಕೊಳ್ಳುತ್ತಾ ತನ್ನ ಅವಮಾನವನ್ನು ನನ್ನ ಮುಂದೆ ಇಟ್ಟಿದ್ದ "ದೀದೀ, ಗಣಪತಿಗೇ ಆನೆ ತಲೆ ಮನುಷ್ಯನ ಮೈ ಬದಲು, ಆನೆಯ ದೇಹಾನೇ ಇದ್ದಿದ್ರೆ ಇನ್ನೂ ಚೆನ್ನಾಗಿರ್ತಿತ್ತು ಅಲ್ವಾ?"

ಪ್ರತಿ ದೀಪಾಳಿಗೆ ಅವನು ತಪ್ಪದೆ ನಮ್ಮ ಮನೆಯ ಪುಟ್ಟ ಅತಿಥಿ. ನನ್ನ ಮಕ್ಕಳಿಗೆ ಅವನ ಜೊತೆ ತುಂಬಾ ಆಸೆ. ಅವನಿಗೆ ಅವರೊಡನೆ ಆಡಿ, ಕುಣಿದು, ಮನದಣಿಯೆ ಪಟಾಕಿ ಹಚ್ಚಿದಾಗ ಎಲ್ಲಿಲ್ಲದ ಸಂತಸ.

ಅವನಿಗೆ ಹದಿನೈದು ವರ್ಷ ತುಂಬಿದಾಗ, ಎಲ್ಲಾ ಹುಡುಗರಂತೆಯೇ ಅವನನ್ನೂ ಅನಾಥಾಶ್ರಮದಿಂದ ಕಳಿಸಿ ಬಿಟ್ಟಿದ್ದರು. ಮರದ ಕೆಲಸದಲ್ಲಿ ಸ್ವಲ್ಪ ತರಬೇತಿ ಕೊಟ್ಟು, ವರ್ಕ್ ಶಾಪ್ ಒಂದರಲ್ಲಿ ಕೆಲಸ ಕೊಡಿಸಿದ್ದರು. ನನ್ನ ಬದುಕಿನಲ್ಲಿ ಹಾಸುಕೊಕಾಗಿದ್ದ ಹುಡುಗನ ಸಂಪರ್ಕ ಅಂದಿನಿಂದ ಕಡಿದುಹೋಗಿತ್ತು.

ಇವತ್ತು ಮಧ್ಯಾಹ್ನ ಮೂರು ಗಂಟೆಗೆ ಆರಾಮವಾಗಿ ಟೀ ಕುಡಿಯುತ್ತಾ ಕುಳಿತಿದ್ದಾಗ ಕರೆಗಂಟೆಯಾಗಿತ್ತು. ಬಾಗಿಲು ತೆರೆದು ನೋಡಿದಾಗ ನನ್ನೆದುರಿಗೆ ನಿಂತಿದ್ದ ತೆಳ್ಳನೆಯ, ಎತ್ತರವಾದ, ಕುರುಚಲು ಗಡ್ಡದ ಸುಮಾರು 16-17 ವರ್ಷದ ಹುಡುಗ ಯಾರೆಂದು ಗುರುತು ಸಿಗುವುದು ಕಷ್ಟವೇ ಆಯಿತು. ಅನುಮಾನಿಸುತ್ತಾ ಅವನು ದಣಿವಿನ ನಗೆ ನಕ್ಕಿದ್ದ. ಆಗ ಅವನ ಮುರುಕಲು ಹಲ್ಲು ಅವನ ಗುರುತನ್ನು ತಟ್ಟನೆ ನೆನಪಿಗೆ ತಂದಿತ್ತು.

ಅವನ ಮುಖ ನೋಡಿದ ತಕ್ಷಣ ಕಷ್ಟದಲ್ಲಿದ್ದಾನೆ ಎಂದು ತಿಳಿಯುವಂತೆಯೇ ಇತ್ತು. ಒಳಗೆ ಕರೆದು ಕೂಡಿಸಿ, ಟೀ ಮಾಡಿಕೊಟ್ಟೆ, ಅವನು ಆತುರದಿಂದ ಬಿಸ್ಕತ್ತುಗಳನ್ನು ಟೀನಲ್ಲಿ ಅದ್ದಿಕೊಂಡು ಬೇಗ ಬೇಗ ತಿಂದು, ಒಂದೇ ಉಸಿರಿನಲ್ಲಿ ಟೀ ಕುಡಿದು ಮುಗಿಸಿದ. ಆಗ ನಡೆದದ್ದನ್ನೆಲ್ಲಾ ವಿಷಾದವಾಗಿ ಹೇಳಿದ. ಅನಾಥಾಶ್ರಮ ಬಿಟ್ಟು ಹೋದ ಕೆಲವೇ ತಿಂಗಳುಗಳಲ್ಲಿ ಅವನಿಗೆ ವರ್ಕ್ ಶಾಪ್ ಮುಚ್ಚಿಹೋಗಿದ್ದರಿಂದ ಕೆಲಸ ಹೋಗಿತ್ತು. ಆಮೇಲೆ ಅವನು ಕೆಲಸಕ್ಕಾಗಿ ಅಲೆಯದ ಜಾಗವಿರಲಿಲ್ಲ, ಮಾಡದ ಪ್ರಯತ್ನವಿರಲಿಲ್ಲ. ಕೂಡಿ ಹಾಕಿದ್ದ ಕಾಸೆಲ್ಲಾ ಖರ್ಚಾಗಿ, ಖಾಲಿ ಹೊಟ್ಟೆಯಲ್ಲಿ ಬದುಕುವ ಸ್ಥಿತಿ ಬಂದಾಗ, ನನ್ನ ಹತ್ತಿರ ಬಂದಿದ್ದ.

"ತಕ್ಷಣ ನಾನು ಇವನಿಗೆ ಒಂದು ನೌಕರಿ ಹುಡುಕಿ ಕೊಡಲೇಬೇಕು, ಆದರೆ ಎಲ್ಲಿ? ಇವನಿಗಿರುವ ಅರ್ಹತೆಗೆ ಈಗಿನ ಕಾಲದಲ್ಲಿ ಅಷ್ಟು ಸುಲಭವಾಗಿ ಕೆಲಸ ಸಿಗುವುದು ಸಾಧ್ಯವೇ? ಈ ವಿಷಯ ಯೋಚನೆ ಮಾಡುತ್ತಾ ತಲೆ ಚಚ್ಚಿಕೊಳ್ಳುತ್ತಿದ್ದಾಗ, ತಟ್ಟನೆ ನನ್ನ ಪಕ್ಕದ ಮನೆಯ ಮಿಸೆಸ್ ಮೆಹ್ರಾ ನೆನಪಾಗಿದ್ದಳು. ನಿನ್ನೆ ತಾನೇ ಅವಳು ತನ್ನ ಗೋಳಿನೊಂದಿಗೆ ನನ್ನ ಹತ್ತಿರ ಬಂದಿದ್ದು-"ನೋಡಿ ಶೀಲಾಜಿ, ನನ್ನ ಹಣೇಬರಹ, ಒಬ್ಬ ಬಾಯೀನ ಕಟ್ಕೊಂಡು, ಹೇಗೆ ಏಗಲಿ ನೀವೇ ಹೇಳಿ? ಬರ್ತನ್-ಕಪಡಾ-ಝಾಡು-ಕಟಿಕಾ ಮಾಡ್ತಾಳೆ. ಮನೆಗೆ ಹೋಗ್ತಾಳೆ. ಮಕ್ಕಳನ್ನು ಸ್ಕೂಲಿಗೆ ಬಸ್ಸು ಹತ್ತಿಸೋರು ಯಾರು? ದಿನವೆಲ್ಲಾ ಫೋನ್ ತಗೋಳ್ಳೋರು ಯಾರು? ಬಟ್ಟೆ ಇಸ್ತ್ರಿ ಮಾಡೋರು ಯಾರು? ಮಾರ್ಕೆಟಿಗೆ ಹೋಗೋರು ಯಾರು? ಈ ರಾಜು ಹೀಗೆ ಕೈ ಕೊಡ್ತಾನೆ ಅಂತ ನಾನು ಕನಸಿನಲ್ಲೂ ಅಂದುಕೊಂಡಿರಲಿಲ್ಲ. ನನ್ನ ಮಿಸ್ಟರ್ ವಿಷಯ ಅಂತೂ ನಿಮಗೆ ಗೊತ್ತೇ ಇದೆಯಲ್ಲಾ. ದಿನ ಬಿಟ್ಟು ದಿನ ಪಾರ್ಟಿ! ನಾನು ಹೇಗೆ ಮ್ಯಾನೇಜ್ ಮಾಡಲಿ ನೀವೇ ಹೇಳಿ! ಈ ರಾಜೂನ ನನ್ನ ಮಗನಿಗಿಂತ ಹೆಚ್ಚಾಗಿ ನೋಡ್ಕೊಳ್ತಾ ಇದ್ದೆ. ಆದ್ರೂ ಓಡಿಹೋಗಿದ್ದಾನೆ ನೋಡಿ. . ."

ನಾವು ಇನ್ನಾವುದಾದರೂ ವರ್ಕ್ ಶಾಪಿನಲ್ಲೋ ಅಂಗಡಿಯಲ್ಲೋ ಕೆಲಸ ಕೊಡಿಸುವವರೆಗೂ ಮಿಸೆಸ್ ಮೆಹ್ರಾ ಮನೆಯಲ್ಲಿ ಕೆಲಸ ಮಾಡಲು ತಯಾರಿದ್ದಾನೆಯೇ ಎಂದು ಕೇಶವನನ್ನು ಕೇಳಿದೆ. ಕಾತರದಿಂದ ಹೂಂ ಗುಟ್ಟಿದ ಕೇಶವ.

ಅವನನ್ನು ಮಿಸೆಸ್ ಮೆಹ್ರಾಳ ಬಳಿ ಕರೆದುಕೊಂಡು ಹೋದಾಗ ಅವಳ ಮುಖ ಊರಗಲವಾಯಿತು. "ಶೀಲಾಜಿ ಇವನು ಯಾರು? ಎಲ್ಲಿ ಇರ್ತಾನೆ? ಇದುವರೆಗೂ ಎಲ್ಲಿ ಕೆಲಸ ಮಾಡ್ತಿದ್ದ? ಇವರಪ್ಪ ಅಮ್ಮ ಎಲ್ಲಾ ಎಲ್ಲಿದ್ದಾರೆ?" ಪ್ರಶ್ನೆಗಳ ಸುರಿಮಳೆಯನ್ನೇ ಅವಳು ಹಾಕಿದಳು. ಕೇಶವನ ವಿಷಯವನ್ನೆಲ್ಲಾ ಕೂಲಂಕುಷವಾಗಿ ಅವಳಿಗೆ ನಾನು ಹೇಳಿದೆ.

"ಓ ಶೀಲಾಜಿ. .. ಇವನಿಗೆ ಯಾರೂ ಇಲ್ಲಾಂತೀರಿ? ಇವನನ್ನು ಹೇಗೆ ನಂಬೋದು ಆಮೇಲೇನಾದರೂ ಹೆಚ್ಚು ಕಡಿಮೆ ಆದರೆ ಎಲ್ಲಿ ಹೋಗೋದು? ಇವನ ಜವಾಬ್ದಾರಿ ಮೇಲೆ ಮನೆಯೆಲ್ಲಾ ಬಿಡೋಕೆ ಸಾಧ್ಯವೇ?"

ಆ ಕ್ಷಣ ನನಗೆ ಮುಖದ ಮೇಲೆ ರಪ್ಪನೆ ಯಾರೋ ಹೊಡೆದಂತಾಯಿತು. ವಿಧಿಯಿಂದ ಪೆಟ್ಟು ತಿಂದವರೆಲ್ಲಾ ನಂಬಿಕೆಗೆ ಅನರ್ಹರೇ?

"ಕೇಶವನನ್ನು ನಾನು ಎಷ್ಟೋ ವರ್ಷಗಳಿಂದ ನೋಡಿದೀನಿ. ಬಂಗಾರದಂತಾ ಹುಡುಗ, ಅವನೇನೂ ಹೊಸಬನಲ್ಲ" ನಾನು ಗಡುಸಾಗಿ ಹೇಳಿದೆ. ಅವಳು ನನ್ನ ಪಕ್ಕಕ್ಕೆ ಕರೆದು ಅನುಮಾನಿಸುತ್ತಾ ಹೇಳಿದಳು, "ಹೋಗಲಿ ಬಿಡಿ ಹೇಗಿದ್ರೂ ಈಗ ನಂಗೆ ತುಂಬಾ ನೆಸೆಸಿಟಿ ಇರೋದ್ರಿಂದ, ಒಂದೆರಡು ದಿನ ಟ್ರೈ ಮಾಡ್ತೀನಿ. ಆದರೆ ಯಾವಾಗ್ಲೂ ಅವನ ಮೇಲೆ ಒಂದು ಕಣ್ಣಿಟ್ಟೇ ಇರ್ತೀನಿ".

ಮಾರನೆಯ ದಿನ ಮಧ್ಯಾಹ್ನ ಮಿಸೆಸ್ ಮೆಹ್ರಾ ನಮ್ಮ ಮನೆಗೆ ಬಂದಾಗ ಕೇಶವನನ್ನು ಹೊಗಳಿದ್ದೇ ಹೊಗಳಿದ್ದು. "ಶೀಲಾಜಿ, ಹಿ ಈಸ್ ಫ್ಯಾನ್ಟ್ಯಾಸ್ಟಿಕ್. ಯಾವ ಕೆಲಸ ಆದ್ರೂ ಸರಿ, ಬರೋಲ್ಲ ಅನ್ನೋಲ್ಲ ನೋಡಿ, ಇವತ್ತು ಬಾಯಿ ಚಕ್ಕರ್ ಕೊಟ್ಟಿಲ್ವಾಂತ ಎದೆ ಒಡೆದು ಹೋಗಿತ್ತು. ಆದರೆ, ಬರ್ತನ್, ಕಪಡಾ ಕೂಡ ಅವನೇ ಮಾಡಿದ ನೋಡಿ... ಇನ್ನೆಲ್ಲಾ ಕೆಲಸದ ಹುಡುಗರ ಹಾಗಲ್ಲ..." ಇದನ್ನು ಕೇಳಿ ನನ್ನ ಮನಸ್ಸು ಹಗುರವಾಯಿತು. ಕೇಶವ ನನ್ನ ಭರವಸೆಯನ್ನು ಉಳಿಸಿಕೊಂಡಿದ್ದ. ಅಂದೇ ನನ್ನವರು ಅವನಿಗೆ ಯಾವುದಾದರೂ ಫ್ಯಾಕ್ಟರಿಯಲ್ಲಿ ಕೆಲಸ ಕೊಡಿಸಲು ಪ್ರಯತ್ನ ಮಾಡುವುದಾಗಿ ಹೇಳಿದರು.

ಆದರೆ ಅಂದು ರಾತ್ರಿ ನನಗೆ ಭಾರಿ ಆಘಾತ ಕಾದಿತ್ತು. ಮಿಸೆಸ್ ಮೆಹ್ರಾ ಮುಸು ಮುಸು ಅಳುತ್ತಾ ಬಂದಾಗ, "ಶೀಲಾಜಿ, ಕೊನೆಗೂ ಕೇಶವ ಕೈಕೊಟ್ಟ ನೋಡಿ. ನನ್ನ ವಜ್ರದ ಉಂಗುರ ಹೊಡೆದು ಬಿಟ್ಟಿದ್ದಾನೆ... ನನ್ನ ಮದುವೇಲಿ ಕೊಟ್ಟ ಉಂಗುರು ಶೀಲಾಜಿ.... ಸಾವಿರಾರು ರೂಪಾಯಿ ಬೆಲೆ ಬಾಳೋದು ಕೇಳಿದರೆ ನಂಗೇನೂ ಗೊತ್ತಿಲ್ಲ ಅಂತಾನೆ. ಏನು ಮಾಡೋದು ಶೀಲಾಜಿ? ಇವತ್ತೆಲ್ಲಾ ಮನೆಗೆ ಯಾರೂ ಬಂದೇ ಇಲ್ಲ. ಬಾಯಿ ಕೂಡ ಕಾಲಿಟ್ಟಿಲ್ಲ. ಇನ್ಯಾರು ಕದಿಯೋಕೆ ಸಾಧ್ಯ, ನೀವೇ ಹೇಳಿ? ದಿನಾ ನಾನು ಸ್ನಾನ ಮಾಡುವಾಗ, ಡ್ರೆಸ್ಸಿಂಗ್ ಟೇಬಲ್ ಡ್ರಾಯರ್ ನಲ್ಲಿಟ್ಟಿರ್ತೀನಿ ನೋಡಿ ಮನೆಯೆಲ್ಲಾ ತಲೆಕೆಳಕು ಮಾಡಿ ಆಯ್ತು.... ಒಂದು ಸಂದಿ, ಮೂಲೆ ಕೂಡ ಬಿಡದೆ. ನಾಳೆ ನನ್ನ ಮಿಸ್ಟರ್ ಡೆಲ್ಲಿಯಿಂದ ವಾಪಸ್ ಬರ್ತಾರಲ್ಲ ನಾನು ಅವರಿಗೆ ಏನು ಹೇಳಲಿ? ಮತ್ತೆ ನಮ್ಮತ್ತೆ? ಅವರಿಗೇನಾದ್ರೂ ಗೊತ್ತಾದ್ರೆ ನನ್ನ ಕೊಂದೇ ಹಾಕ್ತಾರೆ ಶೀಲಾಜಿ. . ." ಅವಳು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ನನಗೆ ಸಿಡಿಲು ಹೊಡೆದಂತಾಗಿತ್ತು. ಮಿಸೆಸ್ ಮೆಹ್ರಾಳ ವಿಚಾರವೇ ಸರಿಯಾಗಿತ್ತು. ನಾನು ಕೇಶವನನ್ನು ನಂಬಿದ್ದು ತಪ್ಪು. ಎಂಟು - ಹತ್ತು ಸಾವಿರವೆಂದರೆ ಅವನಿಗೆ ಕೆಲವು ದಿನಗಳಿಗಾದರೂ ದೊರೆ ಜೀವನ, ಮನಸ್ಸಿಗೆ ಬಂದಷ್ಟು ಸಿನೆಮಾ ನೋಡಬಹುದು. ಬಟ್ಟೆಕೊಳ್ಳಬಹುದು. ಮಿಠಾಯಿ ತಿನ್ನಬಹುದು, ಮಜಾ ಮಾಡಬಹುದು. ಪ್ರಾಮಾಣಿಕ ಜೀವನಕ್ಕೆ ಅವನನ್ನು ಅಂಟಿಸಲು ಯಾವ ಎಳೆಗಳೂ ಇರಲಿಲ್ಲ. ಏನಾದರೂ ಉಡುಗೊರೆ ತೆಗೆದುಕೊಂಡು ಹೋಗಿ ಕೊಟ್ಟಾಗ, ಹಿಗ್ಗಿ ಹೀರೇಕಾಯಿಯಾಗುವ ಅಕ್ಕ ತಮ್ಮಂದಿರಲಿಲ್ಲ. ತಪ್ಪು ಮಾಡಿದಾಗ ಬೇಸರದಿಂದ ಮುಖ ಚಿಕ್ಕದು ಮಾಡಿಕೊಳ್ಳುವ ಅಮ್ಮ, ಅಜ್ಜಿಯಿರಲಿಲ್ಲ. ಅವನಿಗೆ ಅರ್ಥ ಕೊಡುತ್ತಿದ್ದುದು "ಇಂದು" ಮಾತ್ರ. ಇವತ್ತು ಹೇಗೆ ಕಳೆದೆ, ಹೇಗೆ ಸುಖಪಟ್ಟೆ ಅನ್ನುವುದು ಮಾತ್ರ, ನನಗೆ ಮೊದಲೇ ತಿಳಿದಿರಬೇಕಾಗಿತ್ತು. ಆದರೆ ಕೇಶವ ಹೀಗೇಕಾದ? ಮಕ್ಕಳು ಜೇಡಿಮಣ್ಣಿನಂತೆ, ಅವರನ್ನು ಸುಂದರಮೂರ್ತಿಗಳನ್ನಾಗಿ ಮಾಡುವುದು ತಂದೆ-ತಾಯಿಯರ ಕೈಯಲ್ಲಿದೆ ಎಂದು ಎಲ್ಲೋ ಓದಿದ್ದೆ. ಹಾಗಾದರೆ ಹಲವಾರು ಎಚ್ಚರಗೇಡಿ ಬೆರಳುಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರ ಫಲ ಈ ವಿಕರಾಳ ರೂಪವೇ?

ನಾನು ಮೆಹ್ರಾರ ಮನೆಗೆ ಹೋದೆ. ಮಕ್ಕಳ ಮಲಗುವ ಕೋಣೆಯಲ್ಲಿ ಅವನನ್ನು ಕೂಡಿ ಹಾಕಿದ್ದಳು. ನಾನು ಒಳಗೆ ಹೋದ ತಕ್ಷಣ ಎದ್ದು ನಿಂತ ಕೇಶವ, ಅಪರಾಧದ ನೆರಳು ಹುಡುಕಲು ಅವನ ಕಣ್ಣಿನಾಳದಲ್ಲಿ ದಿಟ್ಟಿಸಿ ನೋಡಿದೆ. ಅವನು ಧೈರ್ಯವಾಗಿ ನನ್ನತ್ತ ಬೀರಿದ ನೆಟ್ಟ ನೋಟ ಒಂದು ಕ್ಷಣ ನನ್ನನ್ನು ಅಲ್ಲಾಡಿಸಿತು. ಅವನು ನಿಧಾನವಾಗಿ ಹೇಳಿದ "ದೀದೀ, ನಾನು ಕಳ್ಳತನ ಮಾಡಲಿಲ್ಲ".

ನಾನು ಅವನಿಗೆ ಒಳ್ಳೆ ಮಾತಿನಲ್ಲಿ ಹೇಳಿ ನೋಡಿದೆ. ಹೆದರಿಸಿ, ಬೆದರಿಸಿ ನೋಡಿದೆ. ಉಂಗುರ ವಾಪಸ್ಸು ಕೊಟ್ಟರೆ ಏನಾದರೂ ಇನಾಮು, ಜೊತೆಗೆ ಒಳ್ಳೆ ಕೆಲಸವನ್ನೂ ಕೊಡಿಸುವುದಾಗಿ ಆಸೆ ತೋರಿಸಿದೆ. ಆದರೆ ಎಲ್ಲದಕ್ಕೂ ಅವನದು ಒಂದೇ ಉತ್ತರ, "ಇಲ್ಲ ದೀದೀ ನನ್ನನ್ನು ನಂಬಿ.... ನಾನು ಉಂಗುರ ಕದಿಯಲಿಲ್ಲ". ಕೊನೆಗೆ ಕೋಪದಿಂದ ಜೋರಾಗಿ ಅವನ ಕೆನ್ನೆಗೆ ಒಂದೇಟು ಕೊಟ್ಟು ರೂಮಿನಿಂದ ಹೊರಗೆ ಬಂದೆ. ಮನೆಗೆ ಬಂದು ಕುಸಿದು ಕುಳಿತೆ. ಅಷ್ಟು ವರ್ಷಗಳಿಂದ ಅಷ್ಟು ಪ್ರೀತಿ, ವಿಶ್ವಾಸ ಕೊಟ್ಟು, ನನ್ನ ಮಗುವಿನಂತೆಯೇ ನೋಡಿಕೊಂಡಿದ್ದ ಹುಡುಗನಿಂದ ಬಿದ್ದ ಪೆಟ್ಟು ತಡಕೊಳ್ಳುವುದು ನನಗೆ ಕಷ್ಟವಾಯಿತು. ಮಿಸ್ಟರ್ ಮೆಹ್ರಾ ಊರಿನಿಂದ ಬಂದ ತಕ್ಷಣ ಅವನನ್ನು ಪೋಲಿಸ್ ಗೆ ಕೊಡುವುದು ಬಿಟ್ಟರೆ ಬೇರೆ ದಾರಿ ಕಾಣಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಏಳು ಗಂಟೆಗೇ ಕರೆಗಂಟೆ ಆದಾಗ ಬಾಗಿಲು ತೆರೆದಾಗ ಮಿಸೆಸ್ ಮೆಹ್ರಾಳ ನಗುಮುಖ ನೋಡಿ ಆಶ್ಚರ್ಯವಾಯಿತು. "ಓಹ್ ಶೀಲಾಜಿ... ನಿನ್ನೆ ರಾತ್ರಿ ನನ್ನ ಉಂಗುರ ಸಿಕ್ಕಿತು... ನೋಡಿ... ನನ್ನ ಕೋಲ್ಡ್ ಕ್ರೀಂ ಬಾಟಲ್ ನಲ್ಲಿತ್ತು. ಇದೆಲ್ಲಾ ನನ್ನ ಬಬ್ಲಾನ ಕೆಲಸಾನೇ ಅನ್ನಿಸುತ್ತೆ. ನನ್ನ ಮಕ್ಕಳ ಚೇಷ್ಟೆ ನಿಮಗೆ ಗೊತ್ತೇ ಇದೆಯಲ್ಲಾ, ಆಡ್ತಾ ಆಡ್ತಾ ಎಲ್ಲೋ ಡ್ರಾಯರ್ ನಿಂದ ತೆಗೆದು ಕೋಲ್ಡ್ ಕ್ರೀಂ ಬಾಟಲಿನಲ್ಲಿ ಹಾಕಿಬಿಟ್ಟಿರಬೇಕು... ನಾನು ಕೇಶವನಿಗೆ ತಕ್ಷಣ ಹೇಳಿದೆ. .. "

ನನ್ನ ತಲೆಯ ಮೇಲಿದ್ದ ಹೊರೆ ಇಳಿದಿತ್ತು. ಆದರೆ ಅಪರಾಧಿ ಪ್ರಜ್ಞೆ ನನ್ನನ್ನು ಪದರ ಪದರವಾಗಿ ಸುತ್ತುಗಟ್ಟತೊಡಗಿತು. ಈಗಲೇ ಕೇಶವನನ್ನು ನೋಡಬೇಕು. ಆದದ್ದೆಲ್ಲಾ ಹೇಳಬೇಕು, ನಾನು ಅವನನ್ನು ನಂಬದೆ ಹೋದದ್ದಕ್ಕೆ, ಚಿಕ್ಕವನಾದರೂ ಅವನಿಂದ ಕ್ಷಮೆ ಕೇಳಬೇಕು. ಅವನ ಮನಸ್ಸಿಗಾದ ನೋವು ನನಗೆ ಮಾತ್ರ ಅರ್ಥವಾಗಲು ಸಾಧ್ಯ ನಾನು ಮೆಹ್ರಾರ ಮನೆಗೆ ಓಡಿಹೋದೆ.

"ಕೇಶವ್... ಕೇಶವ್.... ಎಲ್ಲಿದ್ದಾನೆ ಕೇಶವ್..." ಮನೆಯೆಲ್ಲಾ ಒಂದು ಸುತ್ತು ಹೊಡೆದು ಹೊರಗೆ ಬಂದಾಗ ಮಿಸೆಸ್ ಮೆಹ್ರಾ ಅಲ್ಲೇ ನಿಂತಿದ್ದಳು. ಸಣ್ಣ ದನಿಯಿಂದ ಹೇಳಿದಳು, "ಕೇಶವ್ ಬೆಳಗ್ಗೆಯಿಂದ ಪತ್ತೆನೇ ಇಲ್ಲ ಶೀಲಾಜಿ. .. ಹೇಳದೇ ಕೇಳದೇ ಹೊರಟು ಹೋಗಿದ್ದಾನೆ... ಎಷ್ಟು ಚೆನ್ನಾಗಿ ಕೆಲಸ ಮಾಡ್ತಾ ಇದ್ದ... ಮುಖ್ಯ ನನ್ನ ಅದೃಷ್ಟ.... ಇನ್ನು ಫೋನ್ ತೆಗೆದುಕೊಳ್ಳೋರು ಯಾರು, ಮಕ್ಕಳನ್ನು ಸ್ಕೂಲು ಬಸ್ಸು ಹತ್ತಿಸೋರು ಯಾರು, ಬಟ್ಟೆ ಇಸ್ತ್ರಿ ಮಾಡೋರು ಯಾರು, ಮಾರ್ಕೆಟ್ಟಿಗೆ ಹೋಗೋರು ಯಾರು?"

ಆ ಕ್ಷಣ ನನಗೆ ಏನು ಮಾಡಬೇಕೆನ್ನುವುದೇ ತೋರಲಿಲ್ಲ. ಆದರೆ ಒಂದೇ ಒಂದು ಭರವಸೆ ಮನಸ್ಸಿನಾಳದಲ್ಲಿ ಮಿಡುಕುತ್ತಲೇ ಇದೆ...
"ಎಂದಾದರೂ ಒಂದು ದಿನ ನಾನು ಕೇಶವನನ್ನು ನೋಡೇ ನೋಡ್ತೀನಿ.. ಆಗ ಅವನಿಗೆ ನಾನು ಎಲ್ಲಾ ಹೇಳ್ತೀನಿ...."

ನಮ್ಮ ನಡೆವಳಿಕೆ

ಅಡುಗೂಲಜ್ಜಿ

ನಮ್ಮೆಲ್ಲ ನಡೆವಳಿಕೆಗಳೂ ಕೂಡ ಸಾವಿರಾರು ವರ್ಷಗಳಿಂದ ನಮ್ಮ ಹಿರಿಯರು ಪಡೆದ ತಿಳಿವಳಿಕೆಯಿಂದಲೇ ಆಗಿವೆ. ಈಗ ಅದನ್ನು ಎಡಪಂಥೀಯರು ಹಾಗೂ ತಲೆಮಾಸಿದವರು, ಕುರುಡುನಂಬಿಕೆ ಎಂದು ಕರೆಯುತ್ತಾರೆ.

ಕೆಲವನ್ನು ನಾವು ಈಗ ತಿಳಿಯೋಣ.

೧. ಯಾರನ್ನೂ ಮುಟ್ಟಬಾರದು!

ಯಾರೂ ಮುಟ್ಟಿದ ತಿನಿಸನ್ನು ಉಣಬಾರದು. ಮಗು ಹುಟ್ಟಿದ ಹತ್ತು ದಿನ ಮನೆಯವರು ಎಲ್ಲರೂ ಪುರುಡನ್ನು ಹೊತ್ತಿಕೊಂಡು, ಯಾರನ್ನೂ ಮುಟ್ಟಬಾರದು. ಅಂತೆಯೇ ಮನೆಯಲ್ಲಿ ಯಾರದ್ದಾದರೂ ಸಾವಾದರೆ ಸೂತಕವನ್ನು ಎಲ್ಲರೂ ಕಟ್ಟಿಕೊಂಡು, ಯಾರನ್ನೂ ಮುಟ್ಟಬಾರದು.

ಏಯ್ ಬಿಡಿ ಇದು ಯಾವುದೋ ಅಡುಗೂಲಜ್ಜಿಯ ಕಥೆ. ಅದರಿಂದೇನಾಗುವುದು?

ಹಿಂದಿನ ಕಾಲದಲ್ಲಿ ಹಸುಳೆ ಹುಟ್ಟಿದಾಗ ಅದಕ್ಕೆ ಮತ್ತು ಅದರ ತಾಯಿಗೆ ಯಾವುದಾದರೂ ಸೋಂಕಾದರೆ, ಕಾಯಿಲೆ ತಟ್ಟುವುದು ದಿಟ. ಆದುದರಿಂದ, ಆ ಮನೆಗೆ ಬೇರೆ ಯಾರೂ ಹೋಗಬಾರದು, ಆ ಮನೆಯವರನ್ನು ಮುಟ್ಟಬಾರದು.

ಅಂತೆಯೇ ಯಾರಾದರೂ ಸತ್ತರೆ, ಏಕೆ ಸತ್ತರೆ, ಯಾವ ಕಾಯಿಲೆಯಿಂದ ಸತ್ತರು ಎಂದು ತಿಳಿಯದಿದ್ದರಿಂದ ಆ ಸೋಂಕು, ಹಳ್ಳಿಯ ಬೇರೆಯವರಿಗೆ ಸೋಂಕಬಾರದೆಂದು ಆ ಮನೆಯವರನ್ನು ದೂರವಿಡುತ್ತಿದ್ದರು. ಇದಕ್ಕೆ ಇಂಗ್ಲೀಷ್ ನ ಸೋಂಕು ಇರಲಿಲ್ಲ, ಆದರೆ ಸಾವಿರಾರು ವರ್ಷಗಳ ತಿಳಿವಳಿಕೆ ಇತ್ತು. Social Distancing ಎಂದರೆ ಒಪ್ಪುವ ಮಂದಿ 'ಮಡಿ' ಎಂದರೆ ಒಪ್ಪುವುದಿಲ್ಲ.

ಉಣಿಸು- ನಮ್ಮ ಮೈಯಿನ ಮೇಲೆ ಎಲ್ಲಾ ಆರೋಗ್ಯ ಇಲ್ಲಾ ಕಾಯಿಲೆಗಳು ನಾವು ಏನು ತಿನ್ನುತ್ತೇವೆ ಎನ್ನುವುದರ ಮೇಲಿದೆ. ನಮ್ಮ ಮೈಗೆ ಒಗ್ಗದಿರುವುದನ್ನು ತಿಂದರೆ ನಮಗೆ ಅಡ್ಡಾದಿಡ್ಡಿಯಾಗುವುದು ದಿಟ. ಆದುದರಿಂದ ಬೇರೆ ಯಾರೋ ಎಲ್ಲಿಯೋ ಮಾಡಿದುದನ್ನು ತಿನ್ನುವುದು ಸೋಂಕಿಗೆ ಎಡೆ ಕೊಡುತ್ತದೆ.

೨. ಬೆಕ್ಕು ಅಡ್ಡ ಬಂದರೆ ತುಸು ತಡೆದು ಮುಂದೆ ಹೋಗಬೇಕು.

ಏಯ್ ಇದು ಅತಿಯಾಯ್ತು. ಬೆಕ್ಕು ಹೋದರೆ ನಾವೇಕೆ ನಿಲ್ಲಬೇಕು?

ಎಲ್ಲಾ ಪ್ರಾಣಿಗಳಿಗೂ ಪ್ರಾಣ ಭಯ ಇರುತ್ತದೆ. ಯಾವ ಬೆಕ್ಕು ಹಾದಿಯಲ್ಲಿ ಅಡ್ಡ ಬರುವುದಿಲ್ಲ. ಆದರೆ ಅದನ್ನು ಇನ್ನಾವುದಾದರೂ ಪ್ರಾಣಿ ಅಥವಾ ಜಂತು, ಅಟ್ಟಿಸಿಕೊಂಡು ಬಂದರೆ ಅದು ಮನುಷ್ಯನಿಗೆ ಹೆದರದೇ ದಾರಿಯನ್ನು ದಾಟಿ ಓಡಿಹೋಗಬಹುದು. ಬೆಕ್ಕಿಗೆ ಇರುವ ಪ್ರಾಣ ಸಂಕಟ ನಮಗೂ ಒದಗಬಾರದು ಎಂದು ನಾವು ತಡೆದು ನಿಲ್ಲಬೇಕು. ಅದು ಹುಲಿಯಾಗಿರಬಹುದು, ಹಾವಾಗಿರಬಹುದು 'ಎಚ್ಚರ' ನಮ್ಮನ್ನು ಕಾಪಾಡುತ್ತದೆ.

೩. ಅರಳೀ ಮರದ ಕೆಳಗೆ ರಾತ್ರಿ ಮಲಗಬಾರದು. ಅದರ ಕೆಳಗೆ ಭೂತ ಮಲಗಿರುತ್ತದೆ. ಅದು ನಮ್ಮನ್ನು ಕತ್ತು ಹಿಚುಕಿ ಸಾಯಿಸುತ್ತದೆ.

ಎಲ್ಲಾ ಗಿಡ ಮರಗಳೂ ಕೂಡ, ಬೆಳಗಿನ ಹೊತ್ತಲ್ಲಿ ಇಂಗಾಲಾಮ್ಲವನ್ನು ಹೀರಿ ಉಣಿಸನ್ನು ಅಣಿ ಬಿಡುತ್ತವೆ. ಆದರೆ ಅರಳೀಮರ ಬೇವಿನ ಮರಗಳು, ಬೆಳಗಿನ ಹೊತ್ತಲ್ಲಿ ಆಮ್ಲಜನಕವನ್ನು ಹಿಂಗಿ ರಾತ್ರಿ ಇಂಗಾಲಾಮ್ಲವನ್ನು ಹೊರಹಾಕುತ್ತವೆ. ಅದರ ಕೆಳಗೆ ರಾತ್ರಿ ಮಲಗಿದವರಿಗೆ ಉಸಿರಾಡಲು ತೊಂದರೆಯಾಗುತ್ತದೆ. ಕತ್ತು ಹಿಸುಕಿದಂತಾಗುತ್ತದೆ. ಇದೆಲ್ಲವೂ ನಮ್ಮ ಹಿರಿಯರು ತಮ್ಮ ಅನುಭವದಿಂದ ಕಲಿತು, ನಮ್ಮನ್ನು ಎಚ್ಚರಿಸುತ್ತಾರೆ. ನನಗೆ ನಮ್ಮ ಅಜ್ಜಿ ಕಲಿಸಿದ್ದನ್ನು ನಾನು ನಿಮಗೆ ತಿಳಿಸುತ್ತಿದ್ದೇನೆ. ಏಕೆಂದರೆ ನೀವು ಹಲವು ಕಾಲ, ಚೆನ್ನಾಗಿ ಬಾಳಿ ಬದುಕಬೇಕೆಂಬುದು ನನ್ನ ಆಸೆ. ಇನ್ನೇನೂ ಬೇರೆ ಇಲ್ಲ.

ಕಥೆ

ರಂಗಜ್ಜಿ

ಮನಸ್ವಿನಿ (ಮಾನಸ ಎಂ)

ಗೂಳರಿವೆ ಅನ್ನೋದು ತುಮಕೂರಿನ ಪಕ್ಕದಲ್ಲಿರೋ ಒಂದು ಚಿಕ್ಕ ಹಳ್ಳಿ. ನಾನು ಹೈಸ್ಕೂಲಿನಲ್ಲಿದ್ದಾಗ ನಾವೆಲ್ಲಾ ತುಮಕೂರಿನ ವಿಜಯನಗರದಲ್ಲಿ ಬಾಡಿಗೆ ಮನೆಯಲ್ಲಿ ಇದ್ವಿ. ನಮ್ಮ ಪಕ್ಕದ ಮನೆಗೆ ಕಮಲ ಆದಾಗ ತಾನೇ ಹೊಸದಾಗಿ ಮದುವೆ ಆಗಿ ಬಂದಿದ್ದಳು. ನನಗಿಂತ ಸ್ವಲ್ಪ ದೊಡ್ಡೋಳು. ಹಾಗಾಗಿ ನನಗೂ ಅವಳಿಗೂ ಒಳ್ಳೆ ದೋಸ್ತಿ. ತುಂಬಾ ಒಳ್ಳೇ ಹುಡುಗಿ. ಅವರು ಗಂಡ ಹೆಂಡತಿ ಇಬ್ಬರೇ ಇದ್ದಿದ್ದರಿಂದ ಅಡಿಗೆ, ಮನೆ ಕೆಲಸ ಹೀಗೆ ಎಷ್ಟೋ ವಿಷಯಗಳಲ್ಲಿ ಅವಳು ನಮ್ಮಮ್ಮನ ಸಲಹೆ ಕೇಳೋಕೆ ಬರೋಳು. ಅವಳ ಗಂಡಾನೂ ಸಾಕಷ್ಟು ಚೆನ್ನಾಗಿ ದುಡೀತಾ ಇದ್ದ. ದುಂದು ವೆಚ್ಚ ಮಾಡೋ ಬುದ್ಧಿ ಇಬ್ಬರಲ್ಲೂ ಇರಲಿಲ್ಲ. ಹಾಗಾಗಿ ಸುಮಾರು ಖರ್ಚು ಉಳಿಸಿ ಮುಂದಿನ ಜೀವನಕ್ಕೆ ಅಂತ ಇಡ್ತಾ ಇದ್ದರು. ಹಾಗಂತ ತೀರಾ ಜಿಪುಣತನಾನೂ ಇರಲಿಲ್ಲ. ತಿಂಗಳಿಗೊಮ್ಮೆ ಸಿನಿಮಾ, ಹೋಟೇಲು, ಅವಾಗವಾಗ ಶಾಪಿಂಗ್ ಇದೆಲ್ಲಾ ನಡೆದೇ ಇತ್ತು. ಯಾವಾಗಾದರೂ ಒಮ್ಮೊಮ್ಮೆ ನನಗೂ ಏನಾದ್ರೂ ತರೋಳು. ಇದ್ರ ಜೊತೆಗೆ ನಮ್ಮಮ್ಮನ ಉಳಿತಾಯದ ಪಾಠ ಅವಳಿಗೆ ನಡೆದೇ ಇತ್ತು. ಅವಳೂ ಕೇಳೋಳು. ಅವಳ ಗಂಡನಿಗೆ ವರಮಾನ ಚೆನ್ನಾಗಿ ಇದ್ದಿದ್ರಿಂದ ಅವಳಿಗೆ ಕೆಲಸಕ್ಕೆ ಹೋಗೋ ಅಗತ್ಯ ಇರಲಿಲ್ಲ.

ಇಷ್ಟರ ಮಧ್ಯೆ ನಮ್ಮಮ್ಮ ರಂಗಜ್ಜಿನ ಅವಳಿಗೆ ಪರಿಚಯಿಸಿದ್ರು. ಅಂದ ಹಾಗೆ ಈ ರಂಗಜ್ಜಿ ಯಾರು ಅಂದ್ರೆ, ಈ ಮೊದಲೇ ಶುರುವಿನಲ್ಲೇ ಹೇಳ್ಲಿಲ್ವಾ ಗೂಳರಿವೆ ಅಂತ, ಆ ಊರಿಂದ ಬರ್ತಿದ್ದ ಒಬ್ಬ ಅಜ್ಜಿ. ಗೂಳರಿವೆ ನಮ್ಮ ಮನೆ ಇಂದ ಸುಮಾರು ಮೂರೂವರೆ ಕಿಲೋಮೀಟರ್ ಇದೆ. ನಿತ್ಯ ಈ ಅಜ್ಜಿ ಹೊಟ್ಟೆ ಪಾಡಿಗಾಗಿ ಗೂಳರಿವೆ ಇಂದ ಹೂ ಮಾರೋಕೆ ಬರ್ತಿತ್ತು. ಆ ಅಜ್ಜಿಗೆ ಏನಿಲ್ಲಾಂದ್ರೂ ಸುಮಾರು 65 ರಿಂದ 70 ವರ್ಷ. ತುಂಬಾ ಧಡೂತಿ ದೇಹ. ಅದೆಂಥದೋ ಖಾಯಿಲೆಯಿಂದ ಹಾಗಾಯ್ತು ಅಂತ ಹೇಳೋದು ಆ ಅಜ್ಜಿ. ಸಿಕ್ಕಿದಾಗಲೆಲ್ಲಾ ನನ್ನ ಬಾಯ್ತುಂಬಾ ಮಾತಾಡ್ಸಿ ಒಂದು ಗುಲಾಬಿ ಹೂ ಉಚಿತವಾಗೇ ಕೊಡೋದು. "ಬೇಡಜ್ಜಿ" ಅಂದ್ರೂ ಕೇಳ್ತಿರ್ಲಿಲ್ಲ. ಏನಾದರೂ ಹೆಚ್ಚಿಗೆ ಹೇಳಿದ್ರೆ, "ಯೇ! ಯೆಚ್ಚೂ ಕಮ್ಮಿ ನಿನ್ ವಯಸಿನ್ ಮೊಮ್ಮಗ್ಳು ಅವ್ಳೆ ನಂಗೆ. ನೀನೂ ಅವ್ಳಂಗೇನೆ. ಇರ್ಲಿ ತಗಾ, ಯೆಣ್ಮಗ ಮುಡ್ಕ" ಅನ್ನೋದು. ಆ ಅಜ್ಜಿ ಅಂದರೆ ಒಂಥರಾ ಇಷ್ಟ ನಂಗೆ. ನಾನು ಒಳಗೋಗಿ ನಮ್ಮಮ್ಮನಿಗೆ "ಆ ಹೂವಿನ ದುಡ್ಡು ಸೇರ್ಸಿ ಕೊಟ್ಬಿಡು" ಅಂತ ಹೇಳ್ತಿದ್ದೆ. ನಮ್ಮಮ್ಮನೂ "ಆಯ್ತು" ಅಂತ ಹೇಳಿ ಅಷ್ಟು ಕೊಟ್ಬಿಡೋರು. ತಿಂಗ್ಳ ಕೊನೇಲಿ ಅಜ್ಜೀನ ಲೆಕ್ಕ ಕೇಳಿದ್ರೆ, "ಅಯ್! ಇಸ್ಕೂಲ್ಗೋಗ್ತೀಯಾ. ನಿಂಗೆ ಲೆಕ್ಕ ಮಾಡಕ್ಕೆ ಬರಲ್ಲವಾ!? ಪಟ್ ಅಂತ ಲೆಕ್ಕ ಮಾಡಿ ಹೇಳು ನೋಡನ" ಅನ್ನೋದು. ಸರಿ ಅಂದು ನಮ್ಮಮ್ಮ ಮೊದಲೇ ಲೆಕ್ಕ ಮಾಡಿದ್ ದುಡ್ಡು ಕೊಟ್ಟು ಕಳಿಸೋರು.

ಬೇಸಿಗೇಲಿ ಒಂದಿನ ಭಾನುವಾರ ರಂಗಜ್ಜಿ ಹೂವಿನ ಬುಟ್ಟೀಲಿ ಇನ್ನೂ ಏನೋ ಇಟ್ಕೊಂಡಿತ್ತು. "ಅದೇನಜ್ಜಿ!?" ಅಂತ ಕೇಳಿದ್ದಕ್ಕೆ "ಓ! ಇದಾ, ಕೆತ್ತಲಸು ಮಗಾ. ಇದೇ ಬೀದಿ ಕೊನೇಮನೆ ಗೋವಿಂದೇಗೌಡ್ರು ತಂದ್ಕೊಡು ಅಂದಿದ್ರು, ಅದ್ಕೆ ತಂದಿದೀನಿ" ಅಂತು. ನಂಗೆ ಬಾಯಲ್ಲಿ ನೀರೂರಿತು. ನಂಕಡೆ ಕೆತ್ತ ಹಲಸಿನಕಾಯಿ ಸಾರು ಮತ್ತೆ ಹುಣಿಸೇ ಚಿಗುರಿನ ಹುಳಿಸೊಪ್ಪು ಅಂದ್ರೆ ಮೂಗು ಕೊಯ್ಸಿಕೊಳ್ತಾರೆ ಅಷ್ಟು ಇಷ್ಟ. ಬೇಸಿಗೆ ಮುಗಿಯೋವರೆಗೂ ಅದೇ ಸಮಾರಾಧನೆ. ನಾನು " ಅಜ್ಜಿ, ನಂಗೂ ತಂದ್ಕೊಡಜ್ಜಿ!" ಅಂದೆ. "ಆಯ್ತಮ್ಮ" ಅಂತು ಅಜ್ಜಿ. ನಾನು ಕಮಲನ ಮನೆಗೆ ಹೋಗಿ ಕೆತ್ತ ಹಲಸಿನಕಾಯಿ ಸಾರು ಮತ್ತೆ ಹುಣಿಸೇ ಚಿಗುರಿನ ಹುಳಿಸೊಪ್ಪು ಸಾರಿನ ಬಗ್ಗೆ ಒಂದು ಉಪನ್ಯಾಸ ಕೊಟ್ಟೆ. ಅವಳಿಗೆ ಅದರ ಬಗ್ಗೆ ಗೊತ್ತಿರಲಿಲ್ಲ, ಹಾಗಾಗಿ ಕುತೂಹಲ ಆಯ್ತು. "ಅಮ್ಮ ಸಾರು ಮಾಡಿದಾಗ ನಂಗೂ ಕೊಡೇ" ಅಂದ್ಲು. "ಹೂಂ" ಅಂದೆ. ಮಾರನೇ ದಿನ ಸಾಯಂಕಾಲ ಸ್ಕೂಲಿಂದ ಮನೆಗೆ ಬಂದಾಗ ಅಮ್ಮ ಹಲಸಿನಕಾಯಿ ಕೆತ್ತುತ್ತಾ ಇದ್ದರು. ನಾನು ಮನಸಲ್ಲೇ ರಂಗಜ್ಜಿಗೆ ಧನ್ಯವಾದ ಹೇಳ್ಕೊಂಡೆ. ಅಮ್ಮ ಸಾರು ಮಾಡಿದ್ದೇ ತಡ ಚೆನ್ನಾಗಿ ಬಾರಿಸಿ, ಒಂದು ಬಟ್ಟಲು ಸುಕೊರ್ಂಡು ಹೋಗಿ ಕಮಲಂಗೆ ಕೊಟ್ಟೆ. ತಿಂದ್ಮೇಲೆ "ಸಖತ್ತಾಗಿದೆ ಕಣೇ ಸಾರು. ನಂಗೂ ಕೆತ್ತಕಾಯಿ ತಂದ್ಕೊಡೋಕೆ ಹೇಳು" ಅಂದ್ಲು. ಸರಿ ಅಂತ ನಾನು ಅಮ್ಮಂಗೆ "ಇನ್ಮೇಲಿಂದ ಕಮಲಂಗೂ ಒಂದು ಕೆತ್ತಕಾಯಿ ತಂದ್ಕೊಡೋಕೆ ಹೇಳು ಅಜ್ಜಿಗೆ, ಹಂಗೇ ಹುಣಿಸೇ ಚಿಗುರನ್ನೂ ತರೋಕೆ ಹೇಳು" ಅಂದೆ. "ಸರಿ" ಅಂದ್ರು. ಆವತ್ತಿಂದ ಅವಾಗವಾಗ ಕೆತ್ತ ಹಲಸಿನಕಾಯಿ ಸಾರು ಮತ್ತೆ ಹುಣಿಸೇ ಚಿಗುರಿನ ಹುಳಿಸೊಪ್ಪು ಸಾರಿನ ಸಮಾರಾಧನೆ ಶುರು ಆಯ್ತು.

ಹೀಗೇ ಸುಮಾರು ದಿವಸಗಳ ನಂತರ ಇನ್ನೊಂದು ಭಾನುವಾರ ರಂಗಜ್ಜಿ ತುಂಬಾ ನಿಧಾನವಾಗಿ ನಡ್ಕೊಂಡು ಬಂದು ಮನೆ ಮುಂದೆ ಭಾವಣಿ ಕೆಳಗೆ ನಿಂತು "ಉಶ್! ಸ್ವಲ್ಪ ಬುಟ್ಟಿ ಇಳ್ಸು ಮಗಾ" ಅಂತು. ನಾನು ಕೈ ಹಾಕಿ ಬುಟ್ಟಿ ಇಳಿಸಿದೆ. ಆಗ ಗೊತ್ತಾಯ್ತು ಅದೆಷ್ಟು ಭಾರ ಇದೆ ಅಂತ. ಅಷ್ಟೊಂದು ಭಾರನ ಅದ್ಹೇಗೆ ಅಂಥಾ ವಯಸಲ್ಲೂ ಆ ಶರೀರ ಹೊತ್ಕೊಂಡು ಅಷ್ಟು ದೂರದಿಂದ ನಡ್ಕೊಂಡು ಬರ್ತಿತ್ತೋ ಆ ಅಜ್ಜಿ. ನಂಗಂತೂ ತುಂಬಾನೇ ಪಾಪ ಅನ್ನಿಸ್ತು. ರಂಗಜ್ಜಿ ಪೂರಾ ಸುಸ್ತಾಗಿತ್ತು. ಏದುಸಿರು ಬಿಡ್ತಾ "ಒಂದು ಲೋಟ ನೀರು ಕೊಡಮ್ಮ" ಅಂತು. ತಂದ್ಕೊಟ್ಟೆ. ಅಷ್ಟರಲ್ಲಿ ಅಮ್ಮನೂ ಬಂದ್ರು. ಹೂ, ಹಲಸಿನಕಾಯಿ, ಹುಣಿಸೇಚಿಗುರು ಎಲ್ಲಾ ತಗೊಂಡ್ರು. ಕಮಲಾನೂ ಬಂದು ಎಲ್ಲಾ ತಗೊಂಡ್ಲು.

ಅದ್ಯಾಕೋ ದಿನಾ ಅಷ್ಟು ಚೆನ್ನಾಗಿ ಮಾತಾಡ್ತಾ ಇದ್ದ ಅಜ್ಜಿ ಕಣ್ಣಲ್ಲಿ ಆ ಹೊತ್ತು ನೀರಾಡ್ತಾ ಇತ್ತು. ನಾನು "ಯಾಕಜ್ಜಿ! ಏನಾಯ್ತು!?" ಅಂದೆ. ಪಾಪ ದುಃಖ ತಡೆಯೋಕೆ ಆಗ್ಲಿಲ್ಲ ಅನ್ಸುತ್ತೆ, ಇನ್ನೂ ಜೋರಾಗಿ ಅಳೋಕೆ ಶುರು ಮಾಡ್ತು. ನಾನು, ಅಮ್ಮ,

ಕಮಲ ಎಲ್ಲರೂ ಸ್ವಲ್ಪ ಸಮಾಧಾನ ಹೇಳಿದ್ಮೇಲೆ ಅಜ್ಜಿ ಸುಧಾರಿಸಿಕೊಂಡು "ಹಿಂಗ್ ಕೇಳ್ತೀನಿ ಅಂತ ಬೇಜಾರು ಮಾಡ್ಕಬ್ಯಾಡಮ್ಮ, ನಿನ್ನತ್ರ ಸುಮಾರಾಗಿರೋ ಸೀರೆಗ್ಳು, ಅಂಗೇ ನಿನ್ ಮಗಳ್ದೂ ಒಂದೆಳ್ಡು ಬಟ್ಟೆ ಇದ್ರೆ ಕೊಡಮ್ಮ. ಈ ಸಲ ಉಗಾದಿಗೆ ನನ್ ಸೊಸೆಗೆ ಮೊಮ್ಮಗ್ಳಿಗೆ ಕೊಡ್ಬೇಕು" ಅಂತು. ನಾನು "ಅದಕ್ಯಾಕಜ್ಜಿ ಅಳ್ತೀಯಾ! ಕೇಳಿದ್ರೆ ಕೊಡ್ತೀವಿ ಅಷ್ಟೆ. ಸುಮ್ನಿರು" ಅಂದೆ.

ಆಗ ಅಜ್ಜಿ "ನನ್ ಸೊಸೆ ಒಂದೆಳ್ಡು ಮನೆ ಕೆಲಸ ಮಾಡ್ಕೊಂಡು ದುಡೀತಾಳೆ. ನನ್ ಮಗ ಕುಡ್ಕ. ಮನೆಗೆ ಬಂದು ಬಡಿದು ದುಡಿದಿದ್ದನ್ನೆಲ್ಲಾ ಕಿತ್ಕೊಂಡು ಓಗ್ತಾನೆ. ನಾನು ಸಂಪಾದಿಸಿದ್ದು ಅವನಿಗೆ ಗೊತ್ತಿಲ್ದಂಗೆ ಮುಚ್ಚಿಟ್ಟಿದ್ದೆ. ಕಳ್ಳ ಮುಂಡೇಗಂಡ! ಅದ್ಯಾ ಒತ್ನಾಗ್ ನೋಡ್ಕಂಬುಟ್ನೋ ಗೊತ್ತಿಲ್ಲ. ಅದ್ನೂ ಕಳ್ದು ಬುಟ್ಟವ್ನೆ. ನನ್ ಸೊಸೆ ಇವತ್ತು ಬೆಳ್ಬೆದಳಿಗ್ಗೇನೆ ಜಗ್ಳ ತಗೆದ್ಲು. ನಾನೇ ಬೇಕಾಗಿ ಅವನಿಗೆಲ್ಲಾ ದುಡ್ಡು ಕೊಟ್ಟಿದ್ದೀನಿ ಅಂತ. ಬಾಯಿಗೆ ಬಂದಂಗೆಲ್ಲಾ ಅಂದ್ಲು. ನಾನ್ ತಾನೇ ಯೇನ್ ಮಾಡ್ಲಿ ಯೆಣ್ಣೆಂಗ್ಸು, ಮುದುಕಿ. ಇನ್ನೊಂದು ವಾರ ಕಳುದ್ರೆ ಅಬ್ಬ. ಅವ್ರಿಗೆ ಅಬ್ಬಕ್ಕೆ ಯೇನಾದ್ರೂ ಕೊಡ್ಬೇಕಂತ ನಂಗೂ ಐತೆ. ಅದ್ಕೆ ಒಂದೆಳ್ಡು ಜತೆ ಬಟ್ಟೆ ಕೊಡವ್ವ" ಅಂತ ಹೇಳಿ ಕಣ್ಣಲ್ಲಿ ನೀರಾಕ್ಕೊಂತು. ನನಗಂತೂ "ಅಯ್ಯೋ ಪಾಪ!" ಅನ್ನಿಸ್ತು. ಹಂಗೇ ಅಜ್ಜಿ ಮಗನ ಮೇಲೆ ರೋಷ ಉಕ್ಕಿ ಬಂತು. ಸಮಾಧಾನ ಮಾಡ್ಕೊಂಡು ಒಳಗೋಡೋದೆ ಬಟ್ಟೆ ಹುಡುಕೋಕೆ. ಅಮ್ಮಾನೂ ಬಂದು ಮೂರು ಸೀರೆ ತೆಗೆದಿಟ್ಟರು. ನಾನೂ ನಾಲ್ಕು ಜೊತೆ ಬಟ್ಟೆ ತೆಗೆದಿಟ್ಟೆ.

ಇಷ್ಟರಲ್ಲೇ ಆಚೆ ಏನೋ ಜೋರು ಸಂಭಾಷಣೆ ನಡೀತಾ ಇತ್ತು. ಬಂದು ನೋಡಿದ್ರೆ ಕಮಲ ಜೋರು ಜೋರಾಗಿ "ಇಷ್ಟೇ ದುಡ್ಡು" ಅಂತ ವಾದ ಮಾಡ್ತಾ ಇದ್ಲು. ಅಜ್ಜಿ "ಇಲ್ಲಮ್ಮಾ, ಕಡಿಮೆ ಕೊಟ್ಟಿದ್ದೀಯಾ" ಅಂತಿತ್ತು. ನಮ್ಮಮ್ಮ ಬಂದು ಆ ತಿಂಗ್ಳಿನ ಲೆಕ್ಕ ಎಲ್ಲಾ ಹೇಳಿ ದುಡ್ಡು, ಬಟ್ಟೆ ಎಲ್ಲಾ ಕೊಟ್ರು. ಅಜ್ಜಿ ಖುಷಿಯಾಗಿ ಎಲ್ಲಾ ಇಸ್ಕೊಂತು. ಆಮೇಲೆ "ನೋಡಮ್ಮ ಯಾವ್ದೋ ಲೆಕ್ಕ ಯಾಮಾರಿ ಇಷ್ಟೇ ದುಡ್ದು ಕೊಟ್ಟವ್ರೆ ಕಮಲಮ್ಮ" ಅಂತು. ಕಮಲ "ನೀನು ಕೊಡೋ ಒಣಗಿದ ಹೂವು, ಸೊರಗಿರೋ ಹಲಸಿನಕಾಂಯಿ, ಬಲಿತ ಸೊಪ್ಪಿಗೆ ಇದಕ್ಕಿಂತಾ ಹೆಚ್ಚಿಗೆ ಕೊಡಕ್ಕಾಗಲ್ಲ. ಕೊಡೋದೂ ಕಮ್ಮಿನೇ ಕೊಡ್ತೀಯಾ. ನೀನೇ ಇನ್ನೂ ಸ್ವಲ್ಪ ಸೊಪ್ಪು ಕೊಡು. ಕೆತ್ತಕಾಯಿ ಚಿಕ್ಕದು, ಒಂದರ ರೇಟಿಗೆ ಎರಡು ಕೊಡು" ಅಂತ ದಬಾಯಿಸಿ ಅಷ್ಟೇ ದುಡ್ಡು ಕೊಟ್ಟು ಇನ್ನೂ ಜಾಸ್ತೀನೇ ಈಸ್ಕೊಂಡಳು. "ಹೋಗ್ಲಿ ಬಿಡಮ್ಮ" ಅಂದು ನಾವು ಕೊಟ್ಟಿದ್ದೆಲ್ಲಾ ಬುಟ್ಟೀಲಿ ಇಟ್ಕೊಂಡು ಅಜ್ಜಿ ಹೊರಟೋಯ್ತು. ಆಮೇಲೆ ಕಮಲ "ಆಂಟಿ, ಇಂಥವರನ್ನೆಲ್ಲಾ ಹೀಗೆ ಸಲಿಗೆಯಿಂದ ಇರೋಕೆ ಬಿಡಬಾರ್ದು. ಇವತ್ತು ಬಟ್ಟೆ ಕೇಳಿದ್ದಾಳೆ, ನಾಳೆ ಹಂಗೇ ದುಡ್ಡಿಗೇ ಅಪೀಲು ಮಾಡ್ತಾಳೆ. ಇಂಥವರ ಹತ್ರ ಕಟ್ಟುನಿಟ್ಟಾಗೇ ಇರಬೇಕು" ಅಂತ ಬುದ್ಧಿ ಹೇಳಿ ಅವಳ ಗಂಡ ವಾಕಿಂಗ್ ಹೋಗಿದ್ದೋನು ಬಂದ ಅಂತ ಹೊರಟೋದ್ಲು.

ಹೋಗ್ತಾ ಅವಳ ಗಂಡ "ಪಾಪದ ಅಜ್ಜಿ. ನಿನ್ ಗಂಟೆಲ್ಲಾ ಸವ್ಕೊಂತೀಯಾ ನಾಲ್ಕು ಕಾಸು ಹೆಚ್ಗೆ ಕೊಟ್ರೆ. ಶಾಪಿಂಗ್ ಹೆಸರಲ್ಲಿ ನನ್ನ ಬೋಳಿಸ್ತೀಯಾ ಆಗ ದುಡ್ಡು ಹೋಗಲ್ವಾ. ಅದೇನು ಹೆಂಗ್ಸೋ" ಅಂತ ಅಂದಿದ್ದು ಕೇಳಿಸ್ತು. ನಂಗಂತೂ ಅವಳ ಮೇಲೆ ಪೂರಾ ಕೋಪಾನೇ ಬಂದಿತ್ತು. ಆದ್ರೆ ನಂಗಿಂತಾ ದೊಡ್ಡೋಳು. ನಾನೇನಾದ್ರೂ ಅವಳಿಗೆ ಹೇಳೋಕೆ ಹೋದ್ರೆ ನಮ್ಮಮ್ಮ ನಂಗೇ ಬಯ್ತಾರೆ. ಅದ್ಕೇ ಸುಮ್ನಾದೆ. ಒಂದು ವಾರ ನಾನು ಅವಳನ್ನ ಸರಿಯಾಗಿ ಮಾತಾಡಿಸ್ಲೇ ಇಲ್ಲ. ಆ ವಿಷಯದಲ್ಲಿ ನಂಗೆ ಅವಳ ಬಗ್ಗೆ ತುಂಬಾನೇ ಬೇಜಾರಾಗಿಬಿಡ್ತು.

ಅವಳ ಗಂಡ ಹೇಳಿದ್ದು ಅಕ್ಷರಶಃ ಸತ್ಯ. ಹೊರಗಡೆ ಹೋದಾಗ ಬೇಕನಿಸಿದ್ದಕ್ಕೆ ಹಿಂದೂ ಮುಂದೂ ನೋಡದೇ ಸಾವಿರಾರು ರೂಪಾಯಿ ಖರ್ಚು ಮಾಡ್ತೀವಿ, ಆದ್ರೆ ಹೀಗೆ ಇಳಿವಯಸ್ಸಲ್ಲೂ ಅವರ ಅನ್ನ ಬಟ್ಟೆಗೆ ಪರದಾಡೋ ಪಾಪದವರನ್ನ ಕಂಡ್ರೆ ಉರ್ಕೊಂಡು ಬೀಳ್ತೀವಿ. ಇಂಥಾ ಮನಸ್ಥಿತಿ ಇರೋವ್ರನ್ನ ನೋಡಿದ್ರೆ ವಾಕರಿಕೆ ಬರುತ್ತೆ. ಯಾಕ್ ಹಿಂಗೆ? ನಾವೇನಾದ್ರೂ ಹೋಗೋವಾಗ ಹೊತ್ಕೊಂಡು ಹೋಗ್ತೀವಾ? ಇಷ್ಟೊಂದು ಸಂಕುಚಿತವಾಗಿ ಬದುಕೋದ್ಯಾಕೆ? ಒಂಚೂರು ವಿಶಾಲವಾಗಿ ಯೋಚ್ನೆ ಮಾಡಿದ್ರೆ ನಮ್ಮ ಗಂಟೆಲ್ಲಾ ಕಳ್ಕೊಳ್ತೀವಾ? ಇಷ್ಟಕ್ಕೂ ತಪ್ಪು ಸರಿ ಹೇಳೋಕೆ ಯಾರಾದ್ರೇನು? ಅದಕ್ಕೂ ಬಿಡದೆ ಮಕ್ಕಳನ್ನ ಕುರಿ ಥರ ಬೆಳಸೋದ್ಯಾಕೆ? ಹೀಗೆ ನೂರಾ ಎಂಟು ಪ್ರಶ್ನೆ ಬಂತು ಮನಸ್ಸಿನಲ್ಲಿ. ಆದ್ರೆ ಯಾವುದೊಂದೂ ನಾನು ಬಾಯಿ ಬಿಟ್ಟು ಯಾರನ್ನೂ ಕೇಳ್ಲಿಲ್ಲ. ಹೇಳೋಕೂ ಆಗ್ದೆ, ಕೇಳೋಕೂ ಆಗ್ದೆ ಬರೀ ಹೀಗೆ ಒದ್ದಾಡೋದನ್ನ ಕಲಿಸಿದ್ದಾರೆ ನಮಗೆಲ್ಲಾ.

ನನಗೆ ನನ್ನ ಮೇಲೂ ಅಷ್ಟೇ ರೋಷ ಉಕ್ಕಿ ಬರುತ್ತೆ. ಇಷ್ಟೆಲ್ಲಾ ಹೇಳೋ ನಾನು ನಮ್ಮಮ್ಮನ್ನ ಆಗ್ಲಿ, ಕಮಲನ್ನ ಆಗ್ಲಿ ಪ್ರಶ್ನೆ ಮಾಡಲ್ಲ. ಮಾಡೋ ಧೈರ್ಯನೂ ಇಲ್ಲ. ಅದೇನು ಒಳ್ಳೇವ್ಳು ಅಂತ ತಗೊಂಡಿರೋ ಬಿರುದು ಉಳಿಸಿಕೊಳ್ಳೋ ಚಟಾನೋ, ಇಲ್ಲ ಅದ್ಯಾವ್ದೋ ಅಜ್ಜಿ ಬಗ್ಗೆ ನಾನ್ಯಾಕೆ ತಲೆಕೆಡಿಸ್ಕೋಬೇಕು ಅನ್ನೋ ಉದಾಸೀನಾನೋ, ಇಲ್ಲ ಹೇಗೆ ಇನ್ನೊಬ್ಬರನ್ನು ಪ್ರಶ್ನೆ ಮಾಡೋದು ಅನ್ನೋ ಮುಜುಗರನೋ, ಇಲ್ಲ ಇವನ್ನೆಲ್ಲಾ ಕೇಳಿ ನಾನ್ಯಾವ ಸಮಾಜ ಸುಧಾರಣೆ ಮಾಡಬೇಕಿದೆ ಅನ್ನೋ ಧಾಷ್ಟ್ಯನೋ, ಅಥವಾ ಇವೆಲ್ಲವುಗಳೋ!

ಅಂತೂ ನನಗೆ ಗೊತ್ತಿರೋದೂ ಇಷ್ಟೇ! ಅಲ್ಲಿ ಕೇಳೋಕ್ಕಾಗದೇ ಇದ್ದಿದ್ದನ್ನು ಹೀಗೆ ಇಲ್ಲಿ ಕಾರಿಕೊಂಡು ಕೊಂಚವಾದರೂ ಸಮಾಧಾನ ಹೊಂದೋ ಕಲೆ. ಇದರಿಂದ ಯಾರಿಗೇನು ಉಪಯೋಗಾನೋ ನಂಗೊತ್ತಿಲ್ಲ, ಆದ್ರೆ ಯಾವುದೋ ಒಂದು ಭಾರ ಸ್ವಲ್ಪ ಮಟ್ಟಿಗಾದ್ರೂ ಇಳಿಸ್ಕೊಂಡು ಹಗುರಾದೆ ಅನ್ನೋ ಸಮಾಧಾನ ನಂಗೆ ಸಿಗುತ್ತೆ. ಮೊದ್ಲು ನಾನು ಸರಿ ಇದೀನಾ!? ಈ ಪ್ರಶ್ನೆಗೆ ನಾನು ಉತ್ತರ ಕಂಡ್ಕೋಬೇಕಿದೆ ಈಗ.

Management Insights in Vidura Niti

- **M. A. N. Prasad**

The great Indian epic “Mahabharata” has got many portions which touch upon the various aspects of human interaction. Among them Vidura Niti and Bagavad Gita take an important place. They not only tell you how to conduct yourself wisely in life, but also provide a very useful insight into Management.

Vidura was the half-brother of Dhritarashtra and Pandu. He was the son of a maid-servant of Ambika and Ambālika - the queens of Hastinapura. Thus, Vidura being born to a Sudra woman and having no royal blood, was not considered for, or had any chance of succeeding to the throne of the kingdom. He served his two brothers as a minister. He was an astute thinker and a trusted advisor. Chapter 33 to 40 of Udyoga Parva of Mahabhatatha deals with Vidura Niti. In this Vidura outlines what a wise leader should do and what he should avoid. It is a treatise on how to manage an organization in a novel way with clear communication, ethical interpretation of opportunities, aimed at customer satisfaction and optimization of resources. His sayings deal with statecraft, administration and development of oneself. It is in the form of a dialogue between Dritarashtra and Vidura. Vidura’s sayings are in the form of couplets. Given below is an overview of some of his niti.

Division of labour

Vidura says that for a work to be performed well, one needs to focus on 3 factors.

Firstly, the job should be assigned to one who has the potential to perform it.

Secondly, since the individual skills and potential vary, one should motivate the worker by adopting suitable and different strategies.

Thirdly, the supervision and overall decision making must remain with the person leading the team. This will lead to the worker acquiring greater speed, accuracy and specialization in the job assigned to him, avoid confusion and establish a clear communication.

Authority & Responsibility

Authority & Responsibility should co-exist. Authority without responsibility leads to ineffectiveness and irresponsible action.

Control & Command

Control & command should vest with a single person. This will avoid any confusion and misunderstanding. Prevent chaos in the operation.

Characteristics of a good Manager

A good manager is one who:

- Examines the pros & cons of the proposed action before implementing it.
- Exhibits foresight and a balanced judgement.
- Understands things rightly.
- Is not biased by emotional factors.
- Has sound knowledge of various subjects and hence capable of proper decision making.
- Can do efficient work and can also inspire co-workers effectively.

Interpersonal relations

A manager has to speak pleasing words with his co- workers.

yas tāta na krudhyati sarva kālaṁ bhṛtyasya bhaktasya hite ratasya |
tasmin bhṛtyā bhartari viśvasanti na cainam āpatsu parityajanti ||

Meaning: The Manager, who does not say unpleasant things to a devoted worker, assiduously pursues his good, wins his confidence. As a result, even in times of distress, the worker will not desert him.

If he is successful in doing that, he not only gets his work done but also commands respect from his co-workers.
This leads to greater harmony at the work place and the organization and leads to success.

The Market and Competition

A good leader will never underestimate the capability of the competitor. A small competitor can bring down a big brand.

Prosperity

The purpose of commerce is to build prosperity. Here Vidura discusses the factors that promote prosperity.

dhṛtiḥ śamo damaḥ śaucaṁ kāruṇyaṁ vāg aniṣṭhurā |
mitrāṇāṁ cānabhidrohaḥ saptaitāḥ samidhaḥ śriyaḥ ||

Meaning: Self-confidence, tranquillity, discipline, purity, compassion, absence of harsh speech and unwillingness to do anything disagreeable to friends are the seven factors that stimulate prosperity.

śrīr maṅgalāt prabhavati prāgalbhyāt sampravardhate |
dākṣyāt tu kurute mūlaṁ saṁyamāt pratitiṣṭhati ||

Meaning: Prosperity results from dedicated working, grows as a consequence of ethical activity, is deeply rooted in skill, and acquires stability due to good management.

Good Advice

yo hi dharmaṁ vyapāśritya hitvā bhartuḥ priyāpriye |
apriyāṇyāha pathyāni tena rājā sahāyavān ||

Meaning: That advisor is a real asset who, without regarding what is agreeable or disagreeable to his employer but keeping Dharma alone in view, says what is unpalatable but beneficial.

ekaṁ viṣa-raso hanti śastreṇaikaśca vadhyate |
sa-rāṣṭraṁ sa-prajaṁ hanti rājānaṁ mantra-viśravaḥ ||

Meaning: A poison can kill one person, a weapon can also kill one; but a wicked advice however, can destroy an entire kingdom with its subjects.

na bhṛtyānāṁ vṛtti saṁrodhanena bāhyaṁ janaṁ sañjighṛkṣeda pūrvam |
tyajanti hyenamucitāvaruddhāḥ snigdhā hyamātyāḥ parihīna bhogāḥ ||

Meaning: One should not seek to improve profits by curtailing privileges given to employees, or by stopping their pay, because, deprived of their means of life and enjoyment, even affectionate counsellors turn against the king and leave him in distress.

vākyaṁ tu yo nādriyate'nuśiṣṭaḥ pratyāha yaścāpi niyujyamānaḥ |
prajñābhimānī pratikūlavādī tyājyaḥ sa tādṛk tvarayaiva bhṛtyaḥ ||

Meaning: The employee who does not obey orders, disregards instructions, is arrogant and given to arguing with his employer, should be terminated without any delay.

astabdham aklībam adīrgha-sūtraṁ sānukrośaṁ ślakṣṇam ahārya manyaiḥ |
arogajātīyam udāra-vākyaṁ dūtaṁ vadanty aṣṭaguṇopapannam ||

Meaning: Learned men say that an employee should be endowed with these eight qualities: skill, absence of pride, absence of procrastination, kindness, cleanliness, incorruptibility, freedom from congenital or chronic diseases and sincerity in his speech.

ನನ್ನ ಪ್ರೀತಿಯ ನೇಸರುವಿಗೆ,

ಗಣಪತಿಯ ರೂಪವು ದೇವನಾಗರಿ ಲಿಪಿಯ 'ಓಂ'ಕಾರವನ್ನು ಹೋಲುತ್ತದೆ. 'ಓಂ'ಕಾರವು ಸೃಷ್ಟಿಗೆ ಆದಿಯೆಂದೂ, 'ಅ'ಕಾರವೂ ಕೂಡ 'ಆದಿ' ಎಂದು ಸೂಚಿಸಿ ಈ ಭಾವನೆಗಳ ಸಂಗಮವಾಗಿ 'ಗಣನಾಯಕ'ನಾದ ಗಣೇಶನ ರೂಪವು ನಿರ್ಮಿತವಾಗಿರಬೇಕು! 'ಗಣಪತಿ'ಯ ಆಕಾರದಲ್ಲಿ ಬ್ರಹ್ಮಾಂಡದ ಅದ್ಭುತ ಕಲ್ಪನೆಗಳು ಅಡಗಿವೆ. ಗಣಪತಿಯು ಆನಂದಮಯ ಕೋಶಕ್ಕೆ ಅಧಿಪತಿಯಾಗಿದ್ದಾನೆ. ಗಣಪತಿಯು ಮಣ್ಣಿನ ಮಗ ಮಣ್ಣಿನಲ್ಲಿಯೇ ಎಲ್ಲವೂ ಇದೆ. ಗಣಪತಿಯು ವಿನೋದಪ್ರಿಯನೂ ಹೌದು. ಆನೆಯ ಮುಖ, ಗಿಡ್ಡದೇಹ, ಡೊಳ್ಳು ಹೊಟ್ಟೆ, ಮಾನ ಮುಚ್ಚಿರಲು ಸುತ್ತಿರುವ ಗಜಚರ್ಮ. ಇದನ್ನೆಲ್ಲಾ 'ಭಕ್ತಿ ಭಾವ'ದಲ್ಲಿ ನೋಡಿದ್ದೇ ಆದರೆ 'ಸಮಗ್ರ ದರ್ಶನ' ವಾದೀತು. ವಿಶ್ವನಾಯಕ ಪರಮಾತ್ಮನಿವನು, ಅದಕ್ಕೇ ಈತನನ್ನು 'ವಿಶ್ವಂಭರ'ನೆಂದು ಕರೆಯುತ್ತಾರೆ. ಈ ಅವಸ್ಥೆಯಲ್ಲಿ ಎರಡು ಪಾದಗಳು, ನಾಲ್ಕು ಕೈಗಳು, ಒಂದು ಮುಖ (ಗಜಮುಖ) ಇರುವುದರಿಂದ 'ಸಪ್ತಾಂಗ'ನೆಂಬ ಲಂಬೋದರ ವರ್ಣನೆ ಮಾಂಡೊಕೂಪನಿಷತ್ ನಲ್ಲಿದೆ. ಮಹಾಕಾಯನಾದ ಇವನ ದೊಡ್ಡ ಹೊಟ್ಟೆ, ಬ್ರಹ್ಮಾಂಡದ ಸಂಕೇತ. ಇವನು ಧಾನ್ಯಾದಿಗಳ ಅಭಿಮಾನಿ ದೇವತೆಯೂ ಹೌದು! ದವಸ ಧಾನ್ಯಾಧಿಗಳೂ ತುಂಬಿದ 'ಕಣಜ'ದ ಸಂಕೇತ, ಹೊಟ್ಟೆಯ ಮೇಲೆ ಸುತ್ತಿರುವ 'ಸರ್ಪ' ಬ್ರಹ್ಮಾಂಡವನ್ನೇ ಹೊತ್ತಿರುವ ಆದಿಶೇಷ. ಇದು ಕುಂಡಲೀನಿ ಶಕ್ತಿಯ ಪ್ರತೀಕ!

'ಗಣಪತಿ'ಯ ಹಸ್ತದಲ್ಲಿರುವ ಪಾಂಶ, ಅಂಕುಶಗಳು, ನಮ್ಮಲ್ಲಿರುವ ರಾಗ, ದ್ವೇಷಗಳನ್ನು ನಿಯಂತ್ರಿಸುವ ಸಾಧನಗಳಾಗಿವೆ. ಈ ನಮ್ಮ ಸಂಸಾರವನ್ನು ಕಟ್ಟಿ ಹಾಕಿರುವ ತ್ರಿಗುಣಾತ್ಮಕ ಹಾಗೂ ಅದ್ವೈತದ ಸೂಚಿಯಾದರೆ 'ವಕ್ರತುಂಡ' ನಾದ ಇವನ ಡೊಂಕಾದ ಸೊಂಡಿಲು 'ಓಂ'ಕಾರದ ಪ್ರತೀಕವಾಗಿದೆ. ಇದು ಜ್ಞಾನೇಂದ್ರಿಯದೊಂದಿಗೆ, ಕರ್ಮೇಂದ್ರಿಯದ ಸಂಯೋಗವಾಗಿದೆ. ಕರ್ಮಶೀಲರಾಗಬೇಕಾದ ಸಂಕೇತವೂ ಸಹ ಇದರಲ್ಲಡಗಿದೆ.

ಶೂರ್ಪಕರ್ಣರಾದ ಗಣಪತಿ ಮೊರದಂತೆ ಕಿವಿಯುಳ್ಳವನು. ಧಾನ್ಯವನ್ನು ಗೇರಿದಾಗ, ಜೊಳ್ಳು ದೂರವಾಗಿ, 'ಶುದ್ಧವಾದ ಧಾನ್ಯ' ಲಭ್ಯವಾಗುವಂತೆ ಸಮಾಜದಲ್ಲಿರುವ ನಮಗೆ ಜೀವನದಲ್ಲಿ ತೋರಿ ಬರುವ ಮಾನಾಪಮಾನಗಳು, ಹೊಗಳಿಕೆ-ತೆಗಳಿಕೆ, ಕಷ್ಟ-ನಷ್ಟಗಳ ವಿಶ್ಲೇಷಣೆಗೈದು ಕೊನೆಗೆ ಸಂತಾಪವನ್ನಷ್ಟೇ ಗ್ರಹಿಸಿಕೊಂಡು ಮುಂದುವರಿಯುವಂತೆ ಇದು ಸೂಚನೆ ನೀಡುತ್ತದೆ. ಗಣಪತಿಯ ಚಿಕ್ಕದಾದ ಸೂಕ್ಷ್ಮಕಣ್ಣು ಎಲ್ಲವನ್ನೂ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿ ಮುಂದುವರಿಯಬೇಕೆಂದು ಸೂಚನೆ ನೀಡುತ್ತದೆ. ಈತನ ವಾಹನವಾಗಿರುವ 'ಮೂಷಕ'ವೂ ಪ್ರಯೋಗ-ಉಪ ಸಂಹಾರಗಳಲ್ಲಿ ಇವನಿಗೆ ಸದಾ ಅಧೀನವಾಗಿರುವ ವಿಘ್ನ ಶಕ್ತಿಗಳಾಗಿವೆ. ಇವುಗಳನ್ನು ಇಷ್ಟ ಬಂದ ಸ್ಥಾನ ಹಾಗೂ ಸಮಯಗಳಲ್ಲಿ ವಿಕಾಸಗೊಳಿಸುವ ಮತ್ತು ಉಪಸಂಹಾರ ಮಾಡಿಕೊಳ್ಳುವ ಪೂರ್ಣಶಕ್ತಿಯನ್ನು ಇವನು ಹೊಂದಿರುತ್ತಾನೆ. ಗಣಪನ ಮಹಿಮೆ ಅಪಾರ, ಅಸದೃಶ! ಅವನ ಪೂಜೆಯಲ್ಲಿ ದೂರ್ವೆಗೆ ಬಹಳ ಪ್ರಾಶಸ್ತ್ಯವಿದೆ! ಇದರಲ್ಲಿ ಔಷಧೀಯ ಗುಣಗಳಷ್ಟೇ ಅಲ್ಲದೆ, ಪ್ರಾಣಶಕ್ತಿಯನ್ನು ರಕ್ಷಿಸುವುದೆಂದು ಹೇಳುವುದುಂಟು. 21 (21) ನಮಸ್ಕಾರಗಳನ್ನುನಾವು ಮಾಡುತ್ತೇವೆ. ಎಲ್ಲದಕ್ಕೂ ಎಲ್ಲಾ ಬಗೆಯ ಉಪಾಸನೆಯಲ್ಲೂ ಭಕ್ತಿಯಿಂದ ಅವನನ್ನು ಆರಾಧಿಸಿದರೆ ನಮ್ಮನ್ನು ಸದಾಕಾಲವೂ ರಕ್ಷಿಸುವುದರಲ್ಲಿ ಎರಡು ಮಾತಿಲ್ಲ! ಈ ಮುದ್ದುಗಣಪ ಎಲ್ಲರಿಗೂ ಒಳಿತು ಮಾಡಲಿ, ನಿಮ್ಮ ಸಡಗರ ಸಂಭ್ರಮದಲ್ಲಿ ಯಾವುದೇ ರೀತಿಯ ವಿಘ್ನಗಳು ಬರದಂತೆ, ಸಾಂಗವಾಗಿ ನೆರವೇರಲಿ! ವರ್ಷವಿಡೀ ನಿಮ್ಮ ಸಂಘದಲ್ಲಿ ಪೂಜೆ ನಮಸ್ಕಾರಗಳು ನಡೆಯಲಿ, ನಂತರ ಎಲ್ಲರೂ ಸವಿಯೂಟ ಸವಿಯಲಿ ಎಂದು ಹಾರೈಸುವ

ವನಜಾರಾಜನ್

Kashi Dispute- What the petitioners are presenting

Today the Dispute of Kashi Vishweshwar Temple and Gyanvapi Mosque is in the courts. What we should recognise and admire is both the Hindu and Muslim sides are presenting their cases calmly in the courts, without whipping a public frenzy. This augurs well for India. Dispute –Debate-Resolve is the only solution before this Nation of multi faiths

The following are the Presentations of the Hindu side in the courts.



Nagar Style Temple Mandaps Map

Temples in the Nagara style of architecture have eight mandaps — Ganesha, Aishwarya, Bhairav, Gyan, Tarkeshwar, Mukti, Dandapani and Shringar, Arya said. “When the Aadi Vishweshwar temple was attacked by Mughal emperor Aurangzeb in 1669, he destroyed the Aishwarya and Mukti mandaps along with the sanctum sanctorum of the temple to build a mosque.”

The Ganesha, Shringar and Dandpanoi Mandaaps in the west, and the Bhairav, Tarakeshwar, Gyan Mandaps could not be destroyed.

The Kahi Vishvweshwar Mandir has this Nagara style, Aurangzeb could not destroy the entire temple the British government had rightly taken a stand that the land belonged to the temple because, as it was never a waqf property, the Muslims cannot claim it to be mosque. Historians have confirmed that Mughal emperor Aurangzeb had issued 'Farman' on April 9, 1669 for demolition of the temple of Adi Visheshwar (Kashi Vishwanath) at Varanasi. There is nothing on record to establish that the then ruler or any subsequent ruler has passed any order to create a Waqf over the land in question or for handing over the land to any Muslim or body of Muslims."

According to Islamic laws, a Mosque cannot be built on earlier Worship place belonging to another religion. A Free Land must be donated by a believer to Build a Mosque. At no time was this land ever donated by any believer. While there is Farman of Aurangzeb to destroy the Vishweshwar Temple, there are no Farmans donating the land for a Mosque.

In 1936, one Dean Mohammed had filed a petition in the Court, making the Secretary of the British Government as a Respondent, stating that the Land No 193, with enclosures all around a Mosque is being used by Muslims and it should be declared as Waqf Property. The Secretary of state for India had filed an affidavit refuting the claim and stated that since ages a Temple stood at the same land long before Islam ever arrived in India. Non-Muslims have using that Land for their worship and have a right of way over the Land. Aurangzeb himself was never the owner of the Land, and had no right over the land. As pr Islamic faith the Land could not be possessed by Muslims.

Further, the Places of Worship Act- 1991 is not applicable to this Dispute which is being put forward by the Muslim side. First of all, the Character of the Location, - Monument – Temple – Mosque- Church has to be determined, and this requires Examination-excavation of the site. Only after this exercise, can the courts can determine whether the Place of worship is Hindu- Islamic or Christian. Section 3 of the Places of Worship Act clearly refers to this and the Supreme court also has made an observation and refused to put a stay of the Videography of the site, as demanded by the Muslim side.

Petitioners state that Worship at Shringar Gauri temple within the present Mosque area was being conducted even prior to and after August 15, 1947. After the Babri Majid Demolition, the Mosque Committee refused to aal daily worship by Hindus at the site. But they were allowed once a year to worship at Shringar Gauri Temple. It is now not allowed for the past three years. They are demanding

that they be allowed to worship, as Article 25 of the Constitution Mandates Right to Worship as a Fundamental Right.

Hi9ndus worship Idols and symbols, all these are present even today in the so-called Gyanvaapi Mosque. The recent Videography ordered by the Trial court has established that there is a large Shivaling in Shiny Blackstone, immersed in a Pool/pond. On the top of it a small white stone split into 5 divisions is pasted using white cement, which can be seen clearly. Underneath is a cellar, which the Hindu side wants to be opened by the court and surveyed.

The Muslim side says that the structure is not a Shivling, but a fountain. The survey team asked the Mosque committee to operate the fountain, which it said is not functional for the past 20 years. There is no supply side and drain side for the water. This is used as the personal washing place- Wuzu Khana, by Muslims devotees before offering Namaaz. The court has now ordered the place to be protected.

Muslim side says that the Mosque was always there and no temple existed at this site.

The Hindu side points out that the Walls of the Mosque still stand, exhibiting Temple motifs architecture and Sanskrit Shlokas. No Mosque would ever have these.

A Nandi statue is facing the Shivling found under the central dome of the Mosque, thus indicating that the original Shivling is still there under the Mosque

We hope and also pray that this dispute is amicable resolved in the courts itself and all accept the verdict of the courts so that peace and harmony are disturbed.

“History Cannot be reversed”. Is this True?

NESARU- crtitic

Today we hear in India, all the opposition parties stating that History cannot be reversed. What has happened has happened and we should move on.

If this was so, please enlightening me why the Indian National Congress fought the British and demanded that British Rule should end. What had happened had happened, and we should have quietly accepted it as the History and moved On!!!

But that is exactly what happened. All the British Laws and style of Administration, Institutions have remained. There is not a single Indian Justice Institution in India today. Panchayats used to decide on all disputes and also on criminal charges. The argument against these institutions were that they discriminated against the Schedule castes. If that was the objection, you could have addressed it and brought more Schedule caste representatives on to Panchayats. Today, the Judiciary appoints judges by itself and a quite a large number of them belong to the same family! Chief Justice Ramana states that some Colonial conduct should be discarded. Pray, why does he wear the Black robes himself, which are handed over from the colonial days?

After the fall of Ottoman Empire after the First world war, all its Arab Lands were separated and Local chieftains were appointed as the Rulers of Fresh Nations. However, the Holy Land of Palestine was retained by the British as a TRUST. But in 1948, they allowed the European Jews to Migrate and Occupy the Land east of Jordan River. After conflict between the Arab nations and the migrant Jews, anew State, Of Israel was established, which is supported by the entire western world. No one ever says it was wrong to establish in a Muslim Majority area, a Minority Jewish state after 2000 years. This clearly shows that History can be reversed.

India should reverse all colonial past. The first step should be to create a Civil and Criminal Code on Indian Lines, and see that the process of Justice moves faster and does not get stuck in the Lawyers’ Market.

ಮುಂಬಯಿ ವಿಶ್ವವಿದ್ಯಾಲಯದ ಪ್ರಕಟಣೆ ರವಿತೇಜ ಪುತ್ತೂರಿನಲ್ಲಿ ಲೋಕಾರ್ಪಣೆ

ರವಿತೇಜ ಜೀವನಚರಿತ್ರೆ, ಆತ್ಮಕಥನ ಮತ್ತು ಬಹುರೂಪಿ ಮನಸ್ಸುಗಳ ಸಂಚಯ ಕೋಶ: ಪ್ರೊ। ಬಿ. ಎ. ವಿವೇಕ್ ರೈ

ಕನ್ನಡ ಸಾಹಿತ್ಯದಲ್ಲಿ ಜೀವನಚರಿತ್ರೆ ಸಾಹಿತ್ಯ ಪ್ರಕಾರಕ್ಕೆ ದೀರ್ಘ ಇತಿಹಾಸವಿದೆ. ಬಹುಮುಖಿ ಆಯಾಮಗಳಿವೆ. ಹಳ್ಳಿಯಲ್ಲಿ ಹುಟ್ಟಿ ತಾನು ಎತ್ತರೆತ್ತರಕ್ಕೆ ಬೆಳೆದರೂ ನೆಲದ ಋಣವನ್ನು ಮರೆಯದೇ ಎಷ್ಟೋ ಜನರಿಗೆ ಸಹಾಯ ಹಸ್ತವನ್ನು ಚಾಚುತ್ತಿರುವ ರವಿ ಶೆಟ್ಟಿ ಅವರ ಸಾಧನೆ ಮಾದರಿಯಾದುದು. ತನ್ನ ಕಠಿಣ ಪರಿಶ್ರಮ, ದುಡಿಮೆಯ ಮೂಲಕ ಅವರು ದೇಶ ವಿದೇಶದಲ್ಲಿ ಹೆಸರಾಗಿದ್ದಾರೆ. ರವಿತೇಜ ಕೃತಿಯ ಮೂಲಕ ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಪೂರ್ಣಿಮಾ ಶೆಟ್ಟಿ ಅವರು ರವಿ ಅವರ ಜೀವನ ಚರಿತ್ರೆಯನ್ನು ಬಹುರೂಪಿ ವಿಧಾನದಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರು ಸಾಕಷ್ಟು ಅಧ್ಯಯನವನ್ನು ನಡೆಸಿ ಈ ಕೃತಿಯನ್ನು ರಚಿಸಿದ್ದಾರೆ. ರವಿ ಶೆಟ್ಟಿ ಅವರ ಆರು ದಶಕಗಳ ಜೀವಿತಾವಧಿಯ ಕಥನವನ್ನು ಇಲ್ಲಿ ಬಿಂಬಿಸಿದ್ದಾರೆ. ಈ ಕೃತಿ ಜೀವನಚರಿತ್ರೆ, ಆತ್ಮಕಥನ ಮತ್ತು ಬಹುರೂಪಿ ಮನಸ್ಸುಗಳ ಸಂಚಯ ಕೋಶ. ಈ ನಿಟ್ಟಿನಲ್ಲಿ ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಮೂಲಕ ಇಂತಹ ಸಾಧಕರ ಸಾಧನೆಗಳನ್ನು ಗುರುತಿಸಿ ಕೃತಿ ರೂಪದಲ್ಲಿ ಹೊರತರುತ್ತಿರುವುದು ಸ್ತುತ್ಯರ್ಹ. ಕೃತಿಯನ್ನು ಹೊರತರುವಲ್ಲಿ ಶ್ರಮಿಸಿದ ಕೃತಿಕಾರರಾದ ಡಾ। ಪೂರ್ಣಿಮಾ ಸುಧಾಕರ ಶೆಟ್ಟಿ ಮತ್ತು ಮಿಥಾಲಿ ಪ್ರಸನ್ನ ರೈ ಅವರ ಪ್ರಯತ್ನ ಶ್ಲಾಘನೀಯ ಎಂದು ಹಿರಿಯ ವಿದ್ವಾಂಸ, ವಿಶ್ರಾಂತ ಕುಲಪತಿ ಪ್ರೊ। ಬಿ. ಎ. ವಿವೇಕ್ ರೈ ನುಡಿದರು.

ಕೃತಿಗಳನ್ನು ಪರಿಚಯಿಸಿದ ಸಾಹಿತಿ ಡಾ। ನರೇಂದ್ರ ರೈ ದೇರ್ಲ ಅವರು ರವಿ ಶೆಟ್ಟಿ ಅವರು ಸ್ವ ಪ್ರಯತ್ನದಿಂದ ಮೇಲೆ ಬಂದವರು. ಅವರು ಲಾಭದ ಉದ್ಧೇಶದಿಂದ ಸಮಾಜ ಸೇವೆಯಲ್ಲಿ ತೊಡಗಿಲ್ಲ. ಮೌಲ್ಯದ ಉದ್ದೇಶದಿಂದ ಅವರು ಮಾಡಿದ ಎಲ್ಲ ಸಾರ್ಥಕ ಸಾಧನೆಗಳ ದಾಖಲಾತಿ ಈ ಕೃತಿಯ ವೈಶಿಷ್ಟ್ಯ. ರವಿತೇಜ ಕೃತಿ ನಾಗರಿಕತೆಯನ್ನು ತಲುಪುವಾಗ ಸಹಜವಾಗಿ ದತ್ತವಾದಂತಹ ರೈತ ಗುಣದ ಅಂಶಗಳು ಇಲ್ಲಿವೆ. ಈ ಪುಸ್ತಕದೊಳಗೆ ಸಾಮಾನ್ಯರಿಂದ ಹಿಡಿದು ಭಿನ್ನ ಕ್ಷೇತ್ರಗಳ ಸಾಧಕರಿದ್ದಾರೆ. ಸಮಾಜಸೇವಕ, ಸಾಂಘಿಕ ಶಕ್ತಿ, ಸುಸಂಸ್ಕೃತ ವ್ಯಕ್ತಿಯ ಜೀವನಗಾಥೆ ಇಲ್ಲಿ ಅಪೂರ್ವವಾಗಿ ದಾಖಲಾಗಿದೆ. ರವಿತೇಜ ಕೃತಿ ಅತ್ಯಮೂಲ್ಯವಾಗಿದ್ದು, ಯುವ ಪೀಳಿಗೆಗೆ ದಾರಿದೀಪವಾಗಿದೆ ಎಂದು ನುಡಿದರು. ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ರವಿತೇಜ ಕೃತಿಯ ಅಕಸ್ಮಿಕ ಹುಟ್ಟಿಗೆ ಕಾರಣವಾದ ಹಿನ್ನೆಲೆಯನ್ನು ವಿವರಿಸುತ್ತಾ ಸಹಕರಿಸಿದ ಎಲ್ಲರನ್ನು ಸ್ಮರಿಸಿಕೊಂಡರು. ಮುಂಬಯಿ ವಿವಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಹಾಗೂ ಐಲೇಸಾ ತಂಡದವರು ಕೃತಿ ಬೆಳಕು ಕಾಣುವಲ್ಲಿ ಹಂತ ಹಂತವಾಗಿ ಸಹಕರಿಸಿದ್ದಾರೆ. ಇದು ಕನ್ನಡ ವಿಭಾಗದ 86 ಮತ್ತು 87ನೆಯ ಪ್ರಕಟಣೆಯಾಗಿದೆ. ಕನ್ನಡ ವಿಭಾಗವು ಭಾಷೆ, ಸಾಹಿತ್ಯ, ಸಂಸ್ಕೃತಿಯ ಏಳ್ಗೆಗಾಗಿ ಸದಾ ಶ್ರಮಿಸುತ್ತಿದೆ. ಗುರುಗಳಾದ ಡಾ. ಜಿ. ಎನ್. ಉಪಾಧ್ಯ ಅವರು ತಮ್ಮ ಶಿಷ್ಯಂದಿರ ಬೆಳವಣಿಗೆಯಲ್ಲಿ ಸದಾ ಮುತುವರ್ಜಿ ವಹಿಸುವ ಗುಣವನ್ನು ಹೊಂದಿರುವುದಿರಂದಲೇ ಇಂದು ಮುಂಬಯಿಯಲ್ಲಿ ಮಹತ್ವದ ಕೃತಿಗಳು ಬೆಳಕು ಕಾಣುತ್ತಿವೆ. ರವಿತೇಜ ಇದು ವ್ಯಕ್ತಿಯ ಆರಾಧನೆಯ ಪ್ರವೃತ್ತಿಯಿಂದ ಹುಟ್ಟಿದ್ದಲ್ಲ. ಉದ್ಯಮಿ, ಸಂಘಟಕ, ಸಮಾಜಸೇವಕ ರವಿ ಶೆಟ್ಟಿ ಅವರ ಉದಾರತೆ, ಸಮಾಜಮುಖಿ ಚಿಂತನೆಗಳು, ನಡೆ–ನುಡಿಗಳು ಮಾರ್ಗದರ್ಶಿಯಾಗಿರಲಿ ಎಂಬ ಮನೋವೃತ್ತಿಯಿಂದ ರಚಿಸಲಾಗಿದೆ. ಅವರ ಸಿದ್ಧಿ–ಸಾಧನೆಗಳನ್ನು, ಜೀವನದ ಯಶೋಗಾಥೆಯನ್ನು ಈ ಕೃತಿಯಲ್ಲಿ ಪಡಿಮೂಡಿಸಲಾಗಿದೆ ಎಂದು ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಸಂಘಟಕರು, ಉದ್ಯಮಿ ಸರ್ವೋತ್ತಮ ಶೆಟ್ಟಿ ಅವರು ರವಿ ಶೆಟ್ಟಿ ಮೂಡಂಬೈಲು ಅವರು ಇಂಗ್ಲೀಷ್‌ಗೆ ಅನುವಾದಿಸಿದ 101 ಸುಭಾಷಿತಗಳು ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿ ಕತಾರ್, ಓಮನ್, ಯು.ಎ.ಇ ಯಂತಹ ಆರು ದೇಶಗಳಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಅಂದರೆ ಅದು ರವಿ ಶೆಟ್ಟಿ ಅವರದು. ಯಾಕೆಂದರೆ ಅವರು ಮಾಡುವ ಯಾವ ಕೆಲಸದಲ್ಲಿಯೂ ಸ್ವಾರ್ಥವಿರುವುದಿಲ್ಲ. ಅಲ್ಲಿ ಇರುವುದು ಪ್ರೀತಿ ಮಾತ್ರ. ತಾಯಿಯನ್ನು ಅಪಾರವಾಗಿ ಪ್ರೀತಿಸುವ, ಗೌರವಿಸುವ ರವಿ ಶೆಟ್ಟಿ ಅವರು ಎಲ್ಲ ವಿಷಯದಲ್ಲಿಯೂ ಮಾದರಿಯಾಗಿದ್ದಾರೆ. ಅರಬ್ ರಾಷ್ಟ್ರದಲ್ಲೂ ತುಳು, ಕನ್ನಡವನ್ನು ಬೆಳೆಸುವಲ್ಲಿ ಅವರ ಪಾತ್ರ ಮಹತ್ತರವಾಗಿದೆ. ಅರಬ್ ರಾಷ್ಟ್ರದಲ್ಲಿ ಬಂಟ ಬಾಂಧವರನ್ನು, ತುಳು–ಕನ್ನಡಿಗರನ್ನು ಒಗ್ಗೂಡಿಸಿದ ಶ್ರೇಯಸ್ಸು ಅವರಿಗಿದೆ. ಅವರ ದಾನ–ಧರ್ಮಗಳಿಂದ ಇಂದು ಊರಿನ ಅದೆಷ್ಟೋ ದೈವಸ್ಥಾನ, ಮಂದಿರ, ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿಯನ್ನು ಕಂಡಿವೆ. ನೆಲೆಯಿಲ್ಲದವರ ಬಾಳಿಗೆ ಬೆಳಕಾದ ಅವರ ಸಾಧನೆಯನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಗುರುತಿಸಿರುವುದಕ್ಕೆ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರನ್ನು, ಪೂರ್ಣಿಮಾ ಶೆಟ್ಟಿ ಅವರನ್ನು ಅಭಿನಂದಿಸುತ್ತಿದ್ದೇನೆ ಎಂದು ರವಿ ಶೆಟ್ಟಿ ಅವರ ಸಾಧನೆಯನ್ನು ಶ್ಲಾಘಿಸಿದರು. ಕಾರ್ಯಕ್ರಮವನ್ನು ದೀಪಪ್ರಜ್ವಲಿಸಿ ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕಿ ಶಕುಂತಳಾ ಶೆಟ್ಟಿ ಅವರು, ಸಣ್ಣ ಹಳ್ಳಿಯಿಂದ ಹೋದ ರವಿ ಶೆಟ್ಟಿ ಅವರು ಪ್ರಚಾರಕ್ಕಾಗಿ ಏನನ್ನೂ ಮಾಡಿದವರಲ್ಲ. ದೇವಸ್ಥಾನಗಳ ಜೀರ್ಣೋದ್ಧಾರವನ್ನು ಮಾಡುವುದರ ಮೂಲಕ, ಅನೇಕ ಕಷ್ಟದಲ್ಲಿರುವ ಜನರಿಗೆ ಸ್ಪಂದಿಸುವ ಮುಖೇನ ಜನಮಾನಸದಲ್ಲಿ ಪ್ರೀತಿಗೆ ಪಾತ್ರರಾಗಿದ್ದಾರೆ. ಉದ್ಯಮದ ಮೂಲಕ 2000 ಕ್ಕೂ ಅಧಿಕ ಕುಟುಂಬಗಳಿಗೆ ಅನ್ನದಾತರಾಗಿದ್ದಾರೆ. ಅವರ ಸಾಧನೆಗೆ ಪದ್ಮಭೂಷಣ, ಪದ್ಮಶ್ರೀ ಒಲಿದು ಬರಲಿ ಎಂದು ಹಾರೈಸಿದರು. ಅವರ ಸಾಧನೆಗಳನ್ನು ಚಿತ್ರಿಸುವ ಕೆಲಸ ಮಾಡಿದ ಪೂರ್ಣಿಮಾ ಶೆಟ್ಟಿ ಹಾಗೂ ಮಿಥಾಲಿ ರೈ ಅವರ ಕೆಲಸ ಅರ್ಥಪೂರ್ಣವಾಗಿದೆ ಎಂದು ನುಡಿದರು.

ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಸಂಚಾಲಕ ತುಕರಾಮ ಪೂಜಾರಿ ಅವರು ಮಾತನಾಡಿ, ಒಬ್ಬ ವ್ಯಕ್ತಿ ನಮ್ಮ ಹೃದಯದಲ್ಲಿ ಸ್ಥಾನ ಪಡೆದುಕೊಳ್ಳಬೇಕಾದರೆ ಅವರ ವ್ಯಕ್ತಿತ್ವ ಆ ರೀತಿಯದ್ದಾಗಿರಬೇಕು. ನಾನು ಕಂಡುಕೊಂಡ ಹಾಗೆ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಸಾಧನೆ ಮಾಡಿರುವ ರವಿ ಶೆಟ್ಟಿ ಅವರ ವ್ಯಕ್ತಿತ್ವ ಅಂತಹದು ಎಂದು ಭಾವಿಸುತ್ತೇನೆ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೊಡಂಕಾಪು ದೀಪಿಕಾ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಮಹಾಬಲೇಶ್ವರ ಹೆಬ್ಬಾರ್ ಅವರು ಮಾತನಾಡಿ, ರವಿ ಶೆಟ್ಟಿ ಅವರಿಗೆ ಎಳವೆಯಿಂದಲೇ ಕನ್ನಡದ ಬಗ್ಗೆ ವಿಶೇಷ ಅಭಿಮಾನ. ಅವರು ಕಲಿಕೆಯಲ್ಲಿಯೂ ಮುಂದು, ಆಟೋಟದಲ್ಲಿಯೂ ಮುಂದೆ ಇದ್ದವರು. ಇಂದಿನ ದಿನಗಳಲ್ಲಿ ಅವರು ಬೆಳೆದ ರೀತಿ ಆಶ್ಚರ್ಯವನ್ನು ಉಂಟು ಮಾಡುತ್ತದೆ. ಅವರೆಷ್ಟು ಎತ್ತರಕ್ಕೇರಿದರೂ ತನ್ನ ಗುರುಗಳ ಮೇಲೆ ಇಟ್ಟಿರುವ ಅನನ್ಯ ಭಕ್ತಿಗೆ ಮೆಚ್ಚಲೇ ಬೇಕು. ಒಬ್ಬ ಒಳ್ಳೆಯ ಶಿಷ್ಯ ಸಿಗುವುದೂ ಧನ್ಯತೆಯ ಭಾವವನ್ನು ಮೂಡಿಸಿದೆ. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದಿಂದ ಅವರ ಸಾಧನೆಯ ಕೃತಿ ಬೆಳಕು ಕಂಡಿರುವುದು ಅಭಿನಂದನೀಯ ಎಂದರು.

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯದ ಗೌರವವನ್ನು ಸ್ವೀಕರಿಸಿ ಮಾತನಾಡಿದ ರವಿ ಶೆಟ್ಟಿ ಅವರು ಕನ್ನಡ ವಿಭಾಗ ಮುಂಬಯಿ ವಿವಿ ನನ್ನನ್ನು ಗುರುತಿಸಿ ರವಿತೇಜ ಕೃತಿಯನ್ನು ಪ್ರಕಟಿಸಿರುವುದು ನನ್ನ ಸೌಭಾಗ್ಯ. ಗಳಿಸಿದ ಅಲ್ಪಾಂಶವನ್ನು ಸಮಾಜಕ್ಕಾಗಿ ವಿನಿಯೋಗಿಸಬೇಕೆಂದು ತಿಳಿದುಕೊಂಡು ಅದರಂತೆ ನಡೆದವನು ನಾನು. ಈ ಸಂದರ್ಭದಲ್ಲಿ ನನ್ನ ಮನೆಯವರು, ಸ್ನೇಹಿತರು, ಹಿತೈಷಿಗಳ ಪ್ರೋತ್ಸಾಹ ನನಗೆ ಶ್ರೀರಕ್ಷೆಯಾಗಿದೆ. ಕತಾರ್ ನನ್ನ ಕರ್ಮಭೂಮಿಯಾಗಿದ್ದು ಅಲ್ಲಿನವರ ಸಹಕಾರವನ್ನು ಮರೆಯಲು ಸಾಧ್ಯವಿಲ್ಲ. ಈ ಕೃತಿಯನ್ನು ರಚಿಸಿದ ಡಾ. ಪೂರ್ಣಿಮಾ ಶೆಟ್ಟಿ ಅವರ ಶ್ರಮಕ್ಕೆ ಬೆಲೆ ಕಟ್ಟಲಾಗದು. ಅದರಂತೆ ಮಿಥಾಲಿ ರೈ ಅವರ ಶ್ರಮವನ್ನು ಎಂದಿಗೂ ಮರೆಯಲಾಗದು. ಇವರಿಬ್ಬರಿಗೂ ನಾನು ಆಭಾರಿಯಾಗಿದ್ದೇನೆ. ಎಲ್ಲ ರೀತಿಯ ಸಹಕಾರವನ್ನು ನೀಡಿದ ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರಿಗೆ ನಾನು ಋಣಿಯಾಗಿದ್ದೇನೆ. ಪ್ರೊ. ವಿವೇಕ್ ರೈ ಅವರ ಸಹಕಾರ, ಸಲಹೆ ನನಗೆ ಮಾರ್ಗದರ್ಶಿಯಾಗಿದೆ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸ, ಗೌರವ ಇದೇ ರೀತಿಯಲ್ಲಿರಲಿ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಅವರಿಗೆ ಕೃತಿಯ ಮೊದಲ ಪ್ರತಿಯನ್ನಿತ್ತು ಗೌರವಿಸಲಾಯಿತು. ಹಾಗೂ ರವಿತೇಜ ಕನ್ನಡ ಕೃತಿಕಾರಾದ ಡಾ. ಪೂರ್ಣಿಮಾ ಎಸ್. ಶೆಟ್ಟಿ ಮತ್ತು ಇಂಗ್ಲೀಷ್ ಅನುವಾದಕಿ, ನಿವೃತ್ತ ಪ್ರಾಂಶುಪಾಲೆ ಮಿಥಾಲಿ ಪ್ರಸನ್ನ ರೈ ಅವರನ್ನು ಗೌರವಿಸಲಾಯಿತು. ಕನ್ನಡ ವಿಭಾಗ ಮುಂಬಯಿ ವಿ.ವಿ.ಯಿಂದ ರವಿ ಶೆಟ್ಟಿ ಮೂಡಂಬೈಲು ಅವರನ್ನು ಅಭಿನಂದಿಸಲಾಯಿತು. ಐಲೇಸಾ ತಂಡದ ಸಾರಥಿ, ಪ್ರಸಿದ್ಧ ಗಾಯಕ ರಮೇಶ್ಚಂದ್ರ ತಂಡದವರಿಂದ ಗಾನ ಸೌರಭ ನಡೆಯಿತು.

ಮೂರು ಕೃತಿಗಳನ್ನು ಗಾಯಕ ರಮೇಶ್ಚಂದ್ರ ಅವರ ಪ್ರಾರ್ಥನೆ, ಚೆಂಡೆವಾದನದೊಂದಿಗೆ ಮೆರವಣಿಗೆಯ ಮೂಲಕ ವೇದಿಕೆಗೆ ತರಲಾಯಿತು. ವೇದಿಕೆಯಲ್ಲಿ ರವಿ ಶೆಟ್ಟಿ ಅವರ ತಾಯಿ ಸರೋಜಿನಿ ಶೆಟ್ಟಿ, ಪತ್ನಿ ಜ್ಯೋತಿ ಶೆಟ್ಟಿ ಅವರು ಉಪಸ್ಥಿತರಿದ್ದರು. ಐಲೇಸಾದ ಕವಿ ಶಾಂತಾರಾಮ ಶೆಟ್ಟಿ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರವಿ ಶೆಟ್ಟಿ ಅವರ ಧರ್ಮಪತ್ನಿ ಜ್ಯೋತಿ ಶೆಟ್ಟಿ ಅವರು ಅತಿಥಿಗಳನ್ನು ಹೂಗುಚ್ಛ ನೀಡಿ ಗೌರವಿಸಿದರು. ಮಿಥಾಲಿ ಪ್ರಸನ್ನ ರೈ ಅವರು ತಮ್ಮ ಅನುವಾದಿತ ಕೃತಿಯ ಬಗ್ಗೆ ಮಾತನಾಡಿ, ಕಾರ್ಯಕ್ರಮ ನಿರ್ವಹಿಸಿದರು. ಐಲೇಸಾ ಸಂಸ್ಥೆಯ ಮುಂಬಯಿ ರೂವಾರಿ, ಡಬ್ಬಿಂಗ್ ಕಲಾವಿದ ಸುರೇಂದ್ರ ಮಾರ್ನಾಡ್ ಅವರು ವಂದಿಸಿದರು. ಕಾರ್ಯಕ್ರಮದಲ್ಲಿ ದೇಶ, ವಿದೇಶದ ಗಣ್ಯರು ಉಪಸ್ಥಿತರಿದ್ದರು.

ಭಾರತಿ – ನಾರಾಯಣ ಪ್ರಸಾದ್

ನಾರಾಯಣ ಪ್ರಸಾದ್, ಅಸೋಸಿಯೇಷನ್‌ನಲ್ಲಿ 17 ವರ್ಷ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. "ನೇಸರು" ತಿಂಗಳೋಲೆ ಅವರದೇ ವಿಚಾರ. ಅದಕ್ಕಾಗಿ ಸಂಪಾದಕರಾಗಿ 1983 ರಿಂದ ದುಡಿದಿದ್ದಾರೆ.

ಭಾರತಿ ನಮ್ಮ ಅತಿ ಹಳೆಯ ಕಲಾವಿದೆ, ಸಂಗೀತವಾಗಲಿ, ನಾಟಕವಾಗಿ ಎತ್ತಿದ ಕೈ. ಅಂತೆಯೇ ಶ್ರೀ ಚಂಪಕನಾಥರ ಸೋದರ ಸೊಸೆ.

ಇವರಿಬ್ಬರ ದಾಂಪತ್ಯ 50 ವರ್ಷಗಳ 'ಬಂಗಾರ ಹಬ್ಬ'ವನ್ನು ಆಚರಿಸುತ್ತಿದೆ. ಮಗ ಚೇತನ್ ಅವನೂ ನಮ್ಮ ಕಿರಿಯ ಕಲಾವಿದ. ಹೀಗೆ ಈ ಪರಿವಾರದ ನಂಟು ನಮ್ಮ ಅಸೋಸಿಯೇಷನ್‌ಗೆ ದೊರಕಿದುದು ನಮ್ಮ ಭಾಗ್ಯವಾಗಿ ಭಾರತಿ, ನಾರಾಯಣ ಪ್ರಸಾದ್, ಚೇತನ್ ಅವರಿಗೆ ನಮ್ಮೆಲ್ಲರ ನಲು ಹಾರೈಕೆಗಳು.

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077